ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸೋಮವಾರ, ಮಾರ್ಚ್ 18, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 306 RNI : 27369/75

50 1974 2023

janathavani@mac.com
www.janathavani.com
08192 254736 91642 99999



## ಗಮನಸೆಳೆದ ಶ್ರೀನಿವಾಸ ಕಲ್ಯಾಣ ವೈಭವ

**ಸಂಭ್ರಮವನ್ನು ಕಣ್ತುಂಬಿಕೊಂಡ ಅಪಾರ ಸಂಖ್ಯೆಯ ಭಕ್ತರು**

ದಾವಣಗೆರೆ, ಮಾ. 17- ತಿರುಪತಿ ತಿಮ್ಮಪ್ಪನ ದೇಗುಲದ ವೈಭವ ಇಂದು ದೇವನಗರಿಯಲ್ಲೂ ಅನಾವರಣಗೊಂಡಿತ್ತು. ಸುಂದರ ವೇದಿಕೆಯಲ್ಲಿ ಶ್ರೀನಿವಾಸ ಕಲ್ಯಾಣ ಸಂಭ್ರಮ ಕಂಡು ಬಂದಿದ್ದು ವಿಶೇಷವೇ ಸರಿ. ಈ ಸಂಭ್ರಮವನ್ನು ಕಣ್ತುಂಬಿಕೊಳ್ಳಲು ಅಪಾರ ಸಂಖ್ಯೆ ಯಲ್ಲಿ ಭಕ್ತರು ಆಗಮಿಸಿದ್ದರು.

ಕಾರ್ಯಕ್ರಮ ಆಯೋಜನೆಗೊಂಡಿದ್ದ ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಒಳಗೆ ಕಾಲಿಡಲೂ ಜಾಗವಿಲ್ಲದಂತೆ ಕೆಲವರು ಹೊರಗಡೆ ಬಾಗಿಲ ಬಳಿ ನಿಂತು ವೀಕ್ಷಣೆ ಮಾಡುತ್ತಿದ್ದರು. ಎತ್ತ ನೋಡಿದರತ್ತ ಜನವೋ ಜನ.

ವಿಘ್ನೇಶನ ಪೂಜೆಯೊಂದಿಗೆ ಕಲ್ಯಾಣೋತ್ಸವಕ್ಕೆ (4ನೇ ಪುಟಕ್ಕೆ)

# ಬಿಜೆಪಿ ಅಭ್ಯರ್ಥಿ ಬದಲಿಗೆ ಭಿನ್ನಮತೀಯರ ಪಟ್ಟು

## ಜಿಲ್ಲೆಯಲ್ಲಿ ಇನ್ನೂ ತಣಿಯದ ಬಂಡಾಯ



ದಾವಣಗೆರೆ, ಮಾ. 17 - ಗಾಯತ್ರಿ ಸಿದ್ದೇಶ್ವರ ಅವರಿಗೆ ಲೋಕಸಭಾ ಚುನಾವಣೆಗೆ ಟಿಕೆಟ್ ಘೋಷಿಸಿದ ನಂತರ ಬಿಜೆಪಿಯಲ್ಲಿ ಉಂಟಾಗಿರುವ ಭಿನ್ನಮತದ ಬೆಂಕಿ ಶಮನವಾಗುತ್ತಿಲ್ಲ. ಅಭ್ಯರ್ಥಿ ಬದಲಿಸುವಂತೆ ಬಂಡಾಯ ಮುಖಂಡರು ಗಡುವು ನೀಡಿದ್ದಾರೆ.

ಅತೃಪ್ತರು ಭಾನುವಾರ ಗೌಪ್ಯ ಸಭೆ ನಡೆಸಿದ್ದು, ತಮ್ಮ ನಿಲುವಿಗೆ ಅಂಟಿಕೊಂಡಿದ್ದಾರೆ. ಈ ಸಭೆಯಲ್ಲಿ ಮಾಜಿ ಸಚಿವ ಕರುಣಾಕರ ರೆಡ್ಡಿ ಸಹ ಪಾಲ್ಗೊಂಡಿದ್ದರು.

ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾ ಚಾರ್ಯ, ಮಾಜಿ ಶಾಸಕ ಬಸವರಾಜ ನಾಯ್ಕ, ಮುಖಂಡರಾದ ಬಿ.ಜಿ. ಅಜಯ್ ಕುಮಾರ್, ಲೋಕಿಕೆರೆ ನಾಗರಾಜ್, ಡಾ. ರವಿಕುಮಾರ್, ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ್, ಕಲ್ಲೇಶ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಭೆಯ ನಂತರ ಮಾತನಾಡಿರುವ ಮಾಜಿ ಸಚಿವ ರವೀಂದ್ರನಾಥ್, ದಾವಣಗೆರೆ ಕ್ಷೇತ್ರದಲ್ಲಿ ಬಿಜೆಪಿಯನ್ನು ಗೆಲ್ಲಿಸುವುದೇ ನಮ್ಮ ಗುರಿಯಾಗಿದೆ. ಆದರೆ, ಸಿದ್ದೇಶ್ವರ ಕುಟುಂಬಕ್ಕೆ ಟಿಕೆಟ್ ಕೊಟ್ಟರೆ ಸೋಲು ಕಟ್ಟಿಟ್ಟ ಬುತ್ತಿ ಎಂದರು.

ದಾವಣಗೆರೆಯಲ್ಲಿ ಬಿಜೆಪಿ ಸೋಲಬಾರದು ಎಂದರೆ ಬೇರೆಯವರಿಗೆ ಟಿಕೆಟ್ ನೀಡಬೇಕು ಎಂಬುದೇ ನಮ್ಮ ಬೇಡಿಕೆ ಎಂದವರು ಹೇಳಿದರು.

ಈ ಬಗ್ಗೆ ನಾವು ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಯಾರ ಬಳಿಯೂ ಹೋಗುವುದಿಲ್ಲ. ಬಂಡಾಯ ಅಭ್ಯರ್ಥಿ ಕಣಕ್ಕಿಳಿಸುವ ಬಗ್ಗೆ ಹಾಗೂ ಹೋರಾಟದ ಬಗ್ಗೆ ದುರ್ಗಾಂಬಿಕಾ ದೇವಿ ಜಾತ್ರೆಯ ಬಳಿಕ ತೀರ್ಮಾನಿಸ ಲಾಗುವುದು ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ರೇಣುಕಾಚಾರ್ಯ, ಬಿಜೆಪಿ ಕಟ್ಟಿ ಬೆಳೆಸಿದವರು ನಾವೇ ಎಂದು ಸಂಸದರು ಹೇಳುತ್ತಿದ್ದಾರೆ. ಹಾಗಾದರೆ ಕಳೆದ ಬಾರಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಏಳು ವಿಧಾನಸಭೆಗಳಲ್ಲಿ ಬಿಜೆಪಿ ಸೋಲಲು ಅವರೇ ಕಾರಣವೇ? ಈ ನೈತಿಕ ಹೊಣೆ ಹೊತ್ತು ಕೊಳ್ಳುತ್ತಾರೆಯೇ? ಎಂದು ಪ್ರಶ್ನಿಸಿದರು.

ಮಹಿಳೆಯೊಬ್ಬರಿಗೆ ಈ ಬಾರಿ ಟಿಕೆಟ್ ನೀಡಬೇಕು ಎನ್ನುವುದಾದರೆ, ಸಾಮಾನ್ಯ ಕಾರ್ಯಕರ್ತೆಗೆ ನೀಡಲಿ. ಯಾವುದೇ ಕಾರ್ಯಕರ್ತನಿಗೆ ಟಿಕೆಟ್ ನೀಡಿದರೂ ನಾವು ತನು, ಮನ, ಧನ ನೀಡಿ ಅವರ ಗೆಲುವಿಗೆ ಹೋರಾಟ ನಡೆಸುತ್ತೇವೆ ಎಂದು ಹೇಳಿದರು.


ಮಾಜಿ ಸಚಿವ ಕರುಣಾಕರ ರೆಡ್ಡಿ ಮಾತನಾಡಿ, ಈ ಹಿಂದೆ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರನ್ನು ಮಂಡಲದ ಅಧ್ಯಕ್ಷರನ್ನಾಗಿ ಮಾಡಲಾಗಿದೆ ಎಂದು ಆರೋಪಿಸಿದರು.

ನಿನ್ನೆ ಹರಪನಹಳ್ಳಿಯಲ್ಲಿ ನಡೆದ ಬಿಜೆಪಿ ಪದಗ್ರಹಣ ಸಮಾರಂಭದಲ್ಲಿ ಪೊಲೀಸರನ್ನು ಕರೆಯಿಸಿ ನಿಷ್ಠಾವಂತ ಕಾರ್ಯಕರ್ತರನ್ನು ಹೊರಗೆ ಕಳುಹಿಸಿದ್ದಾರೆ. ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರನ್ನು ಸಿದ್ದೇಶ್ವರ ಜೊತೆಯಲ್ಲಿಟ್ಟುಕೊಂಡಿದ್ದಾರೆ ಎಂದು ಟೀಕಿಸಿದರು.

ಸಿದ್ದೇಶ್ವರ ಅವರ ವರ್ತನೆಯ ಬಗ್ಗೆ ಕಾರ್ಯಕರ್ತರಲ್ಲಿ ಅಸಮಾಧಾನ ಇದೆ. ನಿಷ್ಠಾವಂತ ಕಾರ್ಯಕರ್ತರಿಗೆ ಬೆಲೆ ಇಲ್ಲದಂತಾಗಿದೆ ಎಂದು ವಿಷಾದಿಸಿದರು.

# ರಾಹುಲ್ ಜೋಡೋ ಯಾತ್ರೆ ಸಂಪೂರ್ಣ

## ಇ.ವಿ.ಎಂ. ಇಲ್ಲದೇ ಮೋದಿ ಗೆಲ್ಲಲಾಗದು ಎಂದ ರಾಹುಲ್



ಮುಂಬೈ, ಮಾ. 17 – ಲೋಕಸಭಾ ಚುನಾವಣೆಗೆ ಮುಂಚೆ ಐ.ಎನ್.ಡಿ.ಐ.ಎ. ಮೈತ್ರಿಕೂಟದ ನಾಯಕರು ಒಂದೇ ಸಮಾವೇಶದಲ್ಲಿ ಹಾಜರಾಗಿ ಬಲಪ್ರದರ್ಶನ ನಡೆಸಿದ್ದು, ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾರತ್ ಜೋಡೋ ನ್ಯಾಯ ಯಾತ್ರೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸಮಾವೇಶ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಇ.ವಿ.ಎಂ., ಇ.ಡಿ., ಸಿ.ಬಿ.ಐ. ಹಾಗೂ ಆದಾಯ ತೆರಿಗೆ ಇಲಾಖೆ ಇಲ್ಲದೇ ಪ್ರಧಾನ ಮಂತ್ರಿ ನರೇಂದ್ರ ಮೋದಿ ಗೆಲ್ಲಲು ಸಾಧ್ಯವಿಲ್ಲ ಎಂದರು.

ನಾವು ಮೋದಿ ವಿರುದ್ಧ ವೈಯಕ್ತಿಕ ಹೋರಾಟ ನಡೆಸುತ್ತಿಲ್ಲ. ಮೋದಿ ಶಕ್ತಿಯೊಂದರ ಪರವಾಗಿ ಕೆಲಸ ಮಾಡುತ್ತಿರುವ ಮುಖವಾಡವಾಗಿದ್ದಾರೆ. ಅವರು ಸಣ್ಣ ವ್ಯಕ್ತಿ ಎಂದು ರಾಹುಲ್ ಲೇವಡಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೋದಿ (4ನೇ ಪುಟಕ್ಕೆ)

# ಸಿ.ಯು.ಇ.ಟಿ - ಯು.ಜಿ. ಪರೀಕ್ಷೆ ವೇಳಾಪಟ್ಟಿಯಲ್ಲಿ ಬದಲಾವಣೆ ಇಲ್ಲ

ನವದೆಹಲಿ, ಮಾ. 17 - ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆಯಾದ ಸಿ.ಯು.ಇ.ಟಿ. - ಯು.ಜಿ. ಅನ್ನು ಮೇ 15ರಿಂದ ಮೇ 31ರ ನಡುವೆ ನಡೆಸಲಾಗುವುದು. ಲೋಕಸಭಾ ಚುನಾವಣೆ ಕಾರಣಕ್ಕಾಗಿ ಈ ವೇಳಾಪಟ್ಟಿಯಲ್ಲಿ ಬದಲಾವಣೆ ಮಾಡುವುದಿಲ್ಲ ಎಂದು ಯು.ಜಿ.ಸಿ. ಅಧ್ಯಕ್ಷ ಜಗದೀಶ್ ಕುಮಾರ್ ಹೇಳಿದ್ದಾರೆ.

ಲೋಕಸಭಾ ಚುನಾವಣೆ ವೇಳಾಪಟ್ಟಿಯನ್ನು ಆಧರಿಸಿ ಪರೀಕ್ಷಾ ದಿನಾಂಕದಲ್ಲಿ ಬದಲಾವಣೆ ಆಗಬಹುದು ಎಂದು ಯು.ಜಿ.ಸಿ. ಅಧ್ಯಕ್ಷರು ಈ ಹಿಂದೆ ಹೇಳಿದ್ದರು. ಏಪ್ರಿಲ್ 19ರಿಂದ ಚುನಾವಣೆ ಆರಂಭವಾಗಲಿದ್ದು, ಜೂನ್ 4ರಂದು ಫಲಿತಾಂಶ ಬರಲಿದೆ. ಮೇ 15ರಿಂದ ಮೇ 31ರ ನಡುವೆ ಪರೀಕ್ಷೆಗಳು ನಡೆಯಲಿವೆ. ಈ ಅವಧಿಯಲ್ಲಿ ಮೇ 20 ಹಾಗೂ 25ರಂದು ಚುನಾವಣೆ ದಿನವೇ ಪರೀಕ್ಷೆಗಳು ಬರಲಿವೆ.

# 100 ದಿನಗಳ ಮಾರ್ಗಸೂಚಿಗಾಗಿ ಸಚಿವರಿಗೆ ಮೋದಿ ಸೂಚನೆ



ನವದೆಹಲಿ, ಮಾ. 17 – ಮುಂದಿನ ನೂತನ ಸರ್ಕಾರಕ್ಕಾಗಿ 100 ದಿನಗಳ ಮಾರ್ಗಸೂಚಿ ರೂಪಿಸುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಚಿವರಿಗೆ ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಭಾನುವಾರ ಬೆಳಿಗ್ಗೆ ಸಂಪುಟ ಸಭೆ ನಡೆಸಿದ ಪ್ರಧಾನಿ ಮೋದಿ, ಸಚಿವರು ತಮ್ಮ ಇಲಾಖೆಗಳ ಕಾರ್ಯದರ್ಶಿಗಳು ಹಾಗೂ ಇತರೆ ಅಧಿಕಾರಿಗಳನ್ನು ಭೇಟಿ ಮಾಡಿ ಮುಂದಿನ ಸರ್ಕಾರದ 100 ದಿನಗಳ ಅಜೆಂಡಾ ಹಾಗೂ ಮುಂದಿನ ಐದು ವರ್ಷಗಳ ಕಾರ್ಯಕ್ರಮಗಳ ಜಾರಿ ಕುರಿತು ಮಾರ್ಗಸೂಚಿ ರೂಪಿಸುವಂತೆ ತಿಳಿಸಿದ್ದಾರೆ.

ಚುನಾವಣಾ ಆಯೋಗವು ಲೋಕಸಭಾ ಚುನಾವಣೆಗಾಗಿ ವೇಳಾಪಟ್ಟಿ ಬಿಡುಗಡೆ ಮಾಡಿದ ಮರುದಿನ ಸಂಪುಟ ಸಭೆ ನಡೆಸಲಾಗಿದೆ.

7 ಹಂತಗಳಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಗಾಗಿ ಚುನಾವಣಾ ಆಯೋಗ ಮಾಡಿರುವ ಶಿಫಾರಸ್ಸುಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಕಳಿಸಲೂ ಸಂಪುಟ ಕ್ರಮ ಆರಂಭಿಸಿದೆ. ಮಾರ್ಚ್ 20ರಂದು ಮೊದಲ ಸುತ್ತಿನ ಮತದಾನಕ್ಕಾಗಿ ಅಧಿಸೂಚನೆ ಹೊರಡಿಸಲಾಗುವುದು.

# ರಷ್ಯಾದ 'ವಿರೋಧ ರಹಿತ' ಚುನಾವಣೆ ಅಂತ್ಯ : ಪುತಿನ್ ಪುನರಾಯ್ಕೆ ನಿಶ್ಚಿತ

ಮಾಸ್ಕೋ, ಮಾ. 17 – ರಷ್ಯಾದ ಸಾರ್ವತ್ರಿಕ ಚುನಾವಣೆ ಭಾನುವಾರ ಅಂತ್ಯಗೊಂಡಿದ್ದು, ವ್ಲಾಡಿಮಿರ್ ಪುತಿನ್ ಅವರು ಇನ್ನೂ ಆರು ವರ್ಷಗಳ ಕಾಲ ಆಡಳಿತ ನಡೆಸುವುದು ಖಚಿತವಾಗಿದೆ. ಪುತಿನ್ ಅವರು ಭಿನ್ನಮತದ ವಿರುದ್ಧ ನಿರ್ದಯ ಕ್ರಮ ತೆಗೆದುಕೊಳ್ಳುತ್ತಿದ್ದು, ಅವರಿಗೆ ಪ್ರಬಲ ಪ್ರತಿಸ್ಪರ್ಧಿ ಇಲ್ಲದಂತಾಗಿದೆ.

ಶುಕ್ರವಾರದಿಂದ ಮೂರು ದಿನಗಳ ಚುನಾವಣೆ ಆರಂಭವಾಗಿತ್ತು. ಪುತಿನ್ ಇಲ್ಲವೇ ಉಕ್ರೇನ್ ವಿರುದ್ಧದ ಸಮರವನ್ನು ಸಾರ್ವಜನಿಕವಾಗಿ ಟೀಕಿಸದಂತಹ ನಿಯಂತ್ರಿತ ವಾತಾವರಣ ಸೃಷ್ಟಿಸಲಾಗಿತ್ತು. ಪುತಿನ್ ಅವರ ತೀವ್ರ ರಾಜಕೀಯ ಎದುರಾಳಿ ಎಲೆಕ್ಸಿ ನವಲ್ನಿ ಅವರು ಕಳೆದ ತಿಂಗಳು ಆರ್ಕಟಿಕ್ ಬಂಧೀಖಾನೆಯಲ್ಲಿ ಮೃತಪಟ್ಟಿದ್ದರು. ಪುತಿನ್ (4ನೇ ಪುಟಕ್ಕೆ)

# ಹಿಂದುತ್ವ, ಪಕ್ಷಕ್ಕಾಗಿ ಸ್ವತಂತ್ರ ಸ್ಪರ್ಧೆ : ಈಶ್ವರಪ್ಪ



ಬೆಂಗಳೂರು, ಮಾ. 17 - ಶಿವಮೊಗ್ಗದಿಂದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಲು ಸಿದ್ಧರಾಗಿರುವ ಬಿಜೆಪಿ ನಾಯಕ ಕೆ.ಎಸ್. ಈಶ್ವರಪ್ಪ ಮನವೊಲಿಕೆ ಯಲ್ಲಿ ಬಿಜೆಪಿ ನಾಯಕರು ವಿಫಲರಾಗಿದ್ದಾರೆ.

ಬಿಜೆಪಿ ನಾಯಕರೊಂದಿಗಿನ ಸಂಧಾನ ಸಭೆಯ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿರುವ ಈಶ್ವರಪ್ಪ, ನಾನು ಮೋದಿ ಪರ ಧ್ವನಿ ಎತ್ತುತ್ತೇನೆ. ಆದರೆ, ನಾಳೆ ನಡೆಯುವ ಮೋದಿ ಕಾರ್ಯಕ್ರಮಕ್ಕೆ ನಾನು ಹೋಗುವುದಿಲ್ಲ ಎಂದು ತಿಳಿಸಿದ್ದಾರೆ.

ನಾನು ಬಿ.ವೈ. ರಾಘವೇಂದ್ರ ವಿರುದ್ಧ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯು ತ್ತಿದ್ದೇನೆ. ಹೀಗಿರುವಾಗ ಮೋದಿ ಅವರ ಸಮಾವೇಶಕ್ಕೆ ಹೋಗುವುದು ಸೂಕ್ತವಾ ಗದು. ಮೋದಿ ಸಮಾವೇಶಕ್ಕೆ ಹೋಗಲು ಸಾಧ್ಯವಾಗದೇ ಇರುವುದಕ್ಕೆ ನನಗೂ ಬೇಸರವಿದೆ ಎಂದರು.

ಯಾವುದೇ ಕಾರಣಕ್ಕೂ ಪಕ್ಷೇತರವಾಗಿ ಸ್ಪರ್ಧಿಸುವ ನಿರ್ಧಾರದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು (4ನೇ ಪುಟಕ್ಕೆ)

# ಕರ್ನಾಟಕ ರಾಜ್ಯ ವಕ್ಫ್ ಪರಿಷತ್ ಸದಸ್ಯರಾಗಿ ಘನಿ ತಾಹೇರ್ ನೇಮಕ



ದಾವಣಗೆರೆ, ಮಾ.17- ಕರ್ನಾಟಕ ರಾಜ್ಯ ವಕ್ಫ್ ಪರಿಷತ್ ಸದಸ್ಯರನ್ನಾಗಿ ನಗರದ ಅಬ್ದುಲ್ ಘನಿ ತಾಹೇರ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯ ವಕ್ಫ್ ಪರಿಷತ್ತನ್ನು ಪುನರ್‌ರಚಿಸಿರುವ ಸರ್ಕಾರ, ದಾವಣಗೆರೆಯ ಅಬ್ದುಲ್ ಘನಿ ತಾಹೇರ್, ಬಂಕಾಪುರದ ಮೊಹಮ್ಮದ್ ಗೌಸ್ ಗುಲ್ಮಿ ಸೇರಿದಂತೆ, 8 ಜನರನ್ನು ಸದಸ್ಯರನ್ನಾಗಿ ನೇಮಕ ಮಾಡಿದೆ.

# ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ನಿರ್ದೇಶಕರಾಗಿ ಸಿರಾಜ್



ದಾವಣಗೆರೆ, ಮಾ. 17- ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ನಿರ್ದೇಶಕರನ್ನಾಗಿ ನಗರದ ಮೊಹಮ್ಮದ್ ಸಿರಾಜ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಈ ನಿಗಮಕ್ಕೆ ಸಿರಾಜ್ ಸೇರಿದಂತೆ ಐವರನ್ನು ನಿರ್ದೇಶಕರನ್ನಾಗಿ ಸರ್ಕಾರ ನೇಮಕ ಮಾಡಿದೆ.




ಶ್ಯಾಬನೂರಿನಲ್ಲಿ ನಾಳೆ ಆಂಜನೇಯ ಸ್ವಾಮಿ ತೇರು

ದಿನಾಂಕ 19.3.2024 ರ ಮಂಗಳವಾರ ರಾತ್ರಿ 12 ಗಂಟೆಗೆ ರಥೋತ್ಸವ
ದಿನಾಂಕ 20.3.2024 ರ ಬುಧವಾರ ಬೆಲ್ಲದ ಬಂಡಿ
ದಿನಾಂಕ 21.3.2024 ರ ಗುರುವಾರ ಓಕುಳಿ

ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...



ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ)
ಸಿದ್ಧಲಿಂಗೇಶ್ವರ ನಗರ, ದಾವಣಗೆರೆ – 577002

NEET/JEE/K-CET

Experienced and Renowned Faculty Team
8 Grand Tests
Paper Discussions
4 Cumulative Part Tests
Exam Tips and Tricks

CRASH COURSE 2024
Course Fee 4,000 Per Subject
Starts from 19-03-2024



HARSHITH S.
AIR* 844
BMC Bengaluru



ABHILASHA K.S.
AIR* 1181
BMC Bengaluru



GIRISH I KAKANUR

Contact: 8073301604, 6361616780
Separate Hostel for Boys & Girls: Hostel Fee 7,000

B.Sc. AGRI Practical Coaching
ADMISSION FOR
B.V.Sc. (VETERINARY) | B.Sc. (AGRI) | B.Sc. (HORTICULTURE)
B.Sc. (FORESTRY) | OTHER FARMSCIENCE COURSES
Course Fee 4,000
Contact : 9535610343, 8073301604, 6361616780



ಕೆ. ಬೇವಿನಹಳ್ಳಿ ಗ್ರಾಮದ ಶ್ರೀ ಗೌಡ್ರ ಜಿ. ಕರಿಬಸಪ್ಪ ನಿಧನ



ಹರಿಹರ ತಾ|| ಕೆ. ಬೇವಿನಹಳ್ಳಿ ಗ್ರಾಮದ ಗೌಡ್ರ ದಿ|| ಚನ್ನಬಸಪ್ಪ ನವರ ಮಗ ಶ್ರೀ ಗೌಡ್ರ ಜಿ. ಕರಿಬಸಪ್ಪ ಇವರು ದಿನಾಂಕ 17.03.2024ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.03.2024ರ ಸೋಮವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮವಾದ ಹರಿಹರ ತಾಲ್ಲೂಕು ಕೆ. ಬೇವಿನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : ಧರ್ಮಪತ್ನಿ ಶ್ರೀಮತಿ ಗೌಡ್ರ ಮಲ್ಲಮ್ಮ
ಮಕ್ಕಳಾದ ಜಿ.ಕೆ. ಉಮಾಮಹೇಶ್ವರ, ಜಿ.ಕೆ. ಶಿವರಾಜ
ಮಗಳು ರೇಖಾ ಮತ್ತು ಸಹೋದರರು, ಅಳಿಯಂದಿರು, ಮೊಮ್ಮಕ್ಕಳು,
ಗೌಡ್ರು ಸಹೋದರರು ಕೆ. ಬೇವಿನಹಳ್ಳಿ.



ಹಾರ್ದಿಕ ಅಭಿನಂದನೆಗಳು



ದಾವಣಗೆರೆ ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ. (Ph.D) ಪದವಿ ಪಡೆದಿರುವ ದಾವಣಗೆರೆಯ ಶ್ರೀ ಮಂಜರಿ ಹನುಮಂತಪ್ಪ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರೂ, ನಮ್ಮ ಆತ್ಮೀಯರೂ ಆದ ಶ್ರೀ ರಾಜೀವ ಈ. ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

'INFLUENCE OF TEACHING APTITUDE, SELF-CONCEPT AND ACHIEVEMENT MOTIVATION ON ACADEMIC ACHIEVEMENT OF STUDENT-TEACHERS OF COLLEGES OF EDUCATION AFFILIATED TO DAVANGERE UNIVERSITY.' ವಿಷಯ ಕುರಿತು ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ವೆಂಕಟೇಶ ಕೆ. ಇವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ಮಹಾ ಪ್ರಬಂಧಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯವು ಶ್ರೀ ರಾಜೀವ ಈ. ಅವರಿಗೆ ಪಿಹೆಚ್.ಡಿ. (Ph.D) ಪದವಿ ನೀಡಿದೆ.

ದಿನಾಂಕ : 12.03.2024ರಂದು ನಡೆದ ದಾವಣಗೆರೆ ವಿಶ್ವವಿದ್ಯಾನಿಲಯದ 11ನೇ ಘಟಿಕೋತ್ಸವ ಸಮಾರಂಭದಲ್ಲಿ ಕರ್ನಾಟಕದ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರು ಶ್ರೀ ರಾಜೀವ ಈ. ಅವರಿಗೆ ಪಿಹೆಚ್.ಡಿ. (Ph.D) ಪದವಿ ಪ್ರದಾನ ಮಾಡಿ ಗೌರವಿಸಿದರು. ಶ್ರೀಯುತ ರಾಜೀವ ಈ. ಅವರಿಗೆ ಹಾರ್ದಿಕ ಶುಭಾಶಯಗಳು.

- ಡಾ. ವೈ. ರಾಮಪ್ಪ, ಎಂ.ಎ. ಪಿಹೆಚ್.ಡಿ., ಅಧ್ಯಕ್ಷರು, ಶ್ರೀ ಹೊಯ್ಸಳ ವಿದ್ಯಾಸಂಸ್ಥೆ, ದಾವಣಗೆರೆ. ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರು, ದಾವಣಗೆರೆ.
- ಸಹಾಯಕ ಪ್ರಾಧ್ಯಾಪಕರು ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ಶ್ರೀ ಮಂಜರಿ ಹನುಮಂತಪ್ಪ, ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.
- ಮುಖ್ಯೋಪಾಧ್ಯಾಯರು ಮತ್ತು ಸಹ ಶಿಕ್ಷಕರು, ಡಾ. ಎ.ವಿ.ಎನ್.ಪ್ರೌಢಶಾಲೆ, ದಾವಣಗೆರೆ.
- ಮುಖ್ಯೋಪಾಧ್ಯಾಯರು ಮತ್ತು ಸಹ ಶಿಕ್ಷಕರು, ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆ, ದಾವಣಗೆರೆ.
- ಶ್ರೀ ಈ. ಮಹೇಶ್, ಶ್ರೀಮತಿ ಶಾಂತಾಬಾಯಿ, ಕಛೇರಿ ಅಧೀಕ್ಷಕರು, ಡಿಹೆಚ್‌ಓ ಕಛೇರಿ, ದಾವಣಗೆರೆ.
- ಶ್ರೀಮತಿ ಸುಶೀಲಾಬಾಯಿ ಎಲ್. ಶ್ರೀ ಈಶ್ವರ್ ಚಂದ್ ನಾಯ್ಕ ದಾವಣಗೆರೆ.
- ಶ್ರೀ ಅರುಣಾಚಲ ಎಂ.ಟಿ., ಎ.ಇ.ಇ., ಬೆಂಗಳೂರು. ಶ್ರೀಮತಿ ಸುಧಾಮಣಿ ಈ.
- ಶ್ರೀಮತಿ ಪ್ರಭಾವತಿ ಜಿ.
- ಚಿ. ಪೃಥ್ವಿರಾಜ್ ಎಂ., ಬಿ.ಇ. (ಮೆಕ್ಯಾನಿಕಲ್)
- ಕು. ಮೇಘನ ಎಂ., ಬಿ.ಇ. (ಐ.ಎಸ್.)
- ಕು. ರಕ್ಷಿತಾ ಎ.ಎಂ., ಬಿ.ಇ., (ಸಿ.ಎಸ್.)
- ಚಿ. ಸುಹಾಸ್, ಬಿ.ಇ. (ಸಿ.ಎಸ್.)

# ರಾಜಕೀಯದಲ್ಲಿ ಒಂದೇ ಪಕ್ಷದಲ್ಲಿ ದೃಢವಾಗಿದ್ದರೆ ಗೌರವ : ಶಾಸಕ ದೇವೇಂದ್ರಪ್ಪ



ಜಗಳೂರು, ಮಾ. 17 - ರಾಜಕೀಯದಲ್ಲಿ ಪಕ್ಷ ಎಂಬುದು ತಾಯಿಯಿದ್ದಂತೆ. ದೃಢವಾಗಿ ಒಂದೇ ಪಕ್ಷಕ್ಕೆ ಸೀಮಿತವಾಗಿದ್ದರೆ ಕಾರ್ಯಕರ್ತರಿಗೆ, ಮುಖಂಡರಿಗೆ ಉನ್ನತ ಸ್ಥಾನ ಸಿಗುವುದು ಖಚಿತ, ಘನತೆ ಗೌರವ ಹೆಚ್ಚಿಸುತ್ತದೆ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು. ಪಟ್ಟಣದ ಶಾಸಕರ ಜನ ಸಂಪರ್ಕ ಕಚೇರಿಯಲ್ಲಿ ಶನಿವಾರ ವಿವಿಧ ಪಕ್ಷಗಳಿಗೆ ಕಾಂಗ್ರೆಸ್ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದಲ್ಲಿದ್ದು ಮೂವತ್ತು ನಲವತ್ತು ವರ್ಷಗಳಿಂದ ಪಕ್ಷಕ್ಕಾಗಿ ದುಡಿದು ವಿಧಾನಸಭೆ ಚುನಾವಣೆಯಲ್ಲಿ ಯಾರೋ ಒಬ್ಬರ ಕಾರಣಕ್ಕೆ ಅಥವಾ ವಿವಿಧ ರಾಜಕೀಯ ಬೆಳವಣಿಗೆಗಳ ಕಾರಣಕ್ಕೆ ಕಾಂಗ್ರೆಸ್ ಪಕ್ಷವನ್ನು ದೂರ ತಳ್ಳಿ ಹೋಗಿದ್ದೀರಿ, ಆದರೆ ಪುನಃ ಕಾಂಗ್ರೆಸ್ ಪಕ್ಷ, ಸಿದ್ಧಾಂತ ಒಪ್ಪಿ ತತ್ವಾದರ್ಶಗಳನ್ನು ಅಪ್ಪಿಕೊಂಡು ಪಕ್ಷಕ್ಕೆ ಸೇರ್ಪಡೆಯಾದ ಎಲ್ಲಾ ಮುಖಂಡರು, ಕಾರ್ಯಕರ್ತರನ್ನು ಹೃದಯಪೂರ್ವಕ ಸ್ವಾಗತಿಸುವೆ ಎಂದರು.

**ಜಗಳೂರು**

ಲೋಕಸಭೆ ಚುನಾವಣೆಗೆ ಎಲ್ಲಾ ಮುಖಂಡರು ಕಾರ್ಯಕರ್ತರು ಸನ್ನದ್ಧರಾಗಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಅಗತ್ಯವಿದ್ದು ಇಂದಿನಿಂದಲೆ ಪಕ್ಷ ಸಂಘಟನೆಯಲ್ಲಿ ತೊಡಗಿಕೊಳ್ಳಬೇಕು, ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳ ಕುರಿತು ಜನರಿಗೆ ತಿಳಿಸಬೇಕು ಎಂದರು. ಕೆಪಿಸಿಸಿ ಎಸ್ಟಿ ವಿಭಾಗದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಕೆಪಿಸಿಸಿ ಆದೇಶದ ಪ್ರಕಾರ ಈ ಹಿಂದೆ ಬೇರೆ ಪಕ್ಷಕ್ಕೆ ಹೋದವರನ್ನು ಕರೆತರಲು ಆದೇಶವಿದ್ದು, ಆದೇಶದಂತೆ ಹಲವಾರು ಮುಖಂಡರು ಕಾರ್ಯಕರ್ತರನ್ನು ಪಕ್ಷಕ್ಕೆ ಬರಮಾಡಿಕೊಂಡಿದ್ದೇವೆ ಎಂದರು.

ಟಿಕೆಟ್ ಸಿಗದವರು ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹೋಗಿ ಟಿಕೆಟ್ ಗಿಟ್ಟಿಸಿಕೊಂಡು ಚುನಾವಣೆಗೆ ಸ್ಪರ್ಧಿಸುತ್ತಾರೆ. ಟಿಕೆಟ್ ಸಿಗಲಿಲ್ಲ ವೆಂದರೆ ಪಕ್ಷೇತರರಾಗಿ ಸ್ಪರ್ಧಿಸುತ್ತಾರೆ. ಆದರೆ ಮುಖಂಡರು, ಕಾರ್ಯಕರ್ತರು ಭವಿಷ್ಯ ಮಾತ್ರ ನಾಯಕರಂತಿರುವುದಿಲ್ಲ. ಆದ್ದರಿಂದ ಪಕ್ಷ ಉತ್ತಮ ಸ್ಥಾನ ಗೌರವ ನೀಡುತ್ತದೆ ಪಕ್ಷದ ನೆರಳಲ್ಲಿ ಬೆಳೆಯಿರಿ ಎಂದು ಕಿವಿ ಮಾತು ಹೇಳಿದರು.

ಗ್ಯಾರಂಟಿ ಯೋಜನೆಗಳು ಅಹಿಂದಕ್ಕೆ ಮಾತ್ರ ಸೀಮಿತವಲ್ಲ, ಎಲ್ಲಾ ಬಡವರ್ಗದವರ ಪಾಲಿನ ದೇವರು ಸಿದ್ದರಾಮಯ್ಯ ಎಂದರು.

ಕೆಪಿಸಿಸಿ ಎಸ್ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಕೀರ್ತಿ ಕುಮಾರ್ ಮಾತನಾಡಿ, ಕಳೆದ ವಿಧಾನಸಭಾ ಕ್ಷೇತ್ರದಿಂದ ಯಾವುದೋ ಕಾರಣದಿಂದ ಪಕ್ಷದಿಂದ ದೂರ ಉಳಿದಿದ್ದ ಮುಖಂಡರು ಕಾರ್ಯಕರ್ತರು ಸ್ವತಃ ಪಕ್ಷದ ಸಿದ್ಧಾಂತ ಒಪ್ಪಿ ಪಕ್ಷ ಸೇರ್ಪಡೆ ಆಗುತ್ತಿರುವುದು ಹರ್ಷ ತಂದಿದೆ. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಸಹಕಾರಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಂಶೀರ್ ಅಹಮದ್, ಅರಸಿಕೆರೆ ಬ್ಲಾಕ್ ಕಾಂಗ್ರೆಸ್ ಅದ್ಯಕ್ಷ ಮಂಜಣ್ಣ, ಪಲ್ಲಾಗಟ್ಟೆ ಶೇಖರಪ್ಪ, ಸೇರಿದಂತೆ ಇತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

# ಪ್ರಧಾನಿ ಮೋದಿ ಸಾಧನೆ ಮನೆ-ಮನೆಗೆ ತಿಳಿಸಿ

## ಹರಪನಹಳ್ಳಿಯಲ್ಲಿ ಕಾರ್ಯಕರ್ತರಿಗೆ ಸಂಸದ ಜಿ.ಎಂ ಸಿದ್ದೇಶ್ವರ ಕರೆ



ಹರಪನಹಳ್ಳಿ, ಮಾ.17- ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳನ್ನು ಬಿಜೆಪಿ ಕಾರ್ಯಕರ್ತರು ಮನೆ–ಮನೆಗೆ ತಿಳಿಸುವ ಮೂಲಕ ಪಕ್ಷಕ್ಕೆ ಬಲ ತುಂಬಬೇಕು ಎಂದು ಸಂಸದ ಜಿ.ಎಂ.ಸಿದ್ದೇಶ್ವರ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಹರಪನಹಳ್ಳಿ ಮಂಡಲಕ್ಕೆ ನೂತನ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಕೆ.ಲಕ್ಷ್ಮಣ ಅವರ ಪದಗ್ರಹಣ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾವೆಲ್ಲರೂ ಬಿಜೆಪಿ ಕುಟುಂಬದವರು ಹರಪನಹಳ್ಳಿ ಹಿಂದುಳಿದ ತಾಲ್ಲೂಕು ಎಂದು ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಮಾಡಲು ಶ್ರಮಿಸಿದ್ದೇನೆ. ನಾನು ಜಿ.ಕರುಣಾಕರ ರೆಡ್ಡಿಯವರ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸುತ್ತೇನೆ. ನಮ್ಮೆಲ್ಲರ ಗುರಿ ನರೇಂದ್ರ ಮೋದಿಯವರನ್ನು ಪ್ರಧಾನಿಯಾಗಿ ಮಾಡುವುದೇ ಆಗಿದೆ ಎಂದರು.

ಹಡಗಲಿ ಶಾಸಕ ಕೃಷ್ಣನಾಯ್ಕ ಮಾತನಾಡಿ, ದೇಶದಲ್ಲಿ ಮತ್ತು ರಾಜ್ಯದಲ್ಲಿ ಈ ಬಾರಿ ಮೋದಿಜಿಯವರ ಗಾಳಿ ಇದ್ದು, ಅವರು ಮತ್ತೆ ಪ್ರಧಾನಿಯಾಗುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿರು.

ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಮಾತನಾಡಿ, ನಾನು ಸಣ್ಣ ಕುಟುಂಬದಿಂದ ಬಂದವಳು ನನಗೆ ಹೆಚ್ಚಿನ ಜವಾಬ್ದಾರಿ ಕೊಟ್ಟಿದ್ದೀರಿ, ಹೆಣ್ಣು ಈ ದೇಶದ ಕಣ್ಣು, ಮೋದಿಜಿಯವರು ನನ್ನನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದಾರೆ. ನನಗೆ ಹೆಚ್ಚಿನ ಮತ ನೀಡುವ ಮೂಲಕ ಮೋದೀಜಿಯವರ ಕೈ ಬಲಪಡಿಸಬೇಕು ಎಂದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ಚನ್ನಬಸವನಗೌಡ ಮಾತನಾಡಿ, ಬರುವ ಲೋಕಸಭೆ ಚುನಾವಣೆಯಲ್ಲಿ ಬೂತ್ ಮಟ್ಟಕ್ಕೆ ಹೋಗಿ ಹರಪನಹಳ್ಳಿ ಕ್ಷೇತ್ರದಿಂದ 25 ಸಾವಿರಕ್ಕೂ ಅಧಿಕ ಮತಗಳಿಂದ ಗಾಯತ್ರಮ್ಮನವರನ್ನು ಗೆಲ್ಲಿಸಬೇಕು ಎಂದು ಕರೆ ನೀಡಿದರು.

ನೂತನ ಬಿಜೆಪಿ ತಾಲ್ಲೂಕು ಅಧ್ಯಕ್ಷ ಕೆ.ಲಕ್ಷ್ಮಣ, ಮುಖಂಡ ಜಿ.ನಂಜನಗೌಡ್ರು ಮಾತನಾಡಿದರು.

ಪುರಸಭೆ ಮಾಜಿ ಅಧ್ಯಕ್ಷ ಹರಾಳು ಅಶೋಕ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಸುವರ್ಣ ಆರುಂಡಿ ನಾಗರಾಜ, ಮುಖಂಡರಾದ ಹನಗವಾಡಿ ವೀರೇಶ್, ಆರುಂಡಿ ನಾಗರಾಜ, ಜಿ.ಎಂ.ಅನಿತ, ಬಾಗಳಿ ಕೊಟ್ರೇಶಪ್ಪ, ಮುತ್ತಿಗಿ ವಾಗೀಶ, ನಿಟ್ಟೂರು ಸಣ್ಣಹಾಲಪ್ಪ, ಕೆ.ಲಿಂಗಾನಂದ, ಅಯ್ಯಳಿ ತಿಮ್ಮಪ್ಪ, ಕಣಿವಿಹಳ್ಳಿ ಮಂಜುನಾಥ ಸೇರಿದಂತೆ ಇತರರು ಇದ್ದರು

# ಎನ್‌ಯು ಆಸ್ಪತ್ರೆಯಿಂದ ಯಶಸ್ವಿ 10 ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಚಿಕಿತ್ಸೆ



ಶಿವಮೊಗ್ಗ, ಮಾ. 17- ಶಿವಮೊಗ್ಗದ ಎನ್‌ಯು ಆಸ್ಪತ್ರೆಯು 10 ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಚಿಕಿತ್ಸೆಯಲ್ಲಿ ಯಶಸ್ವಿಯಾಗಿದೆ ಎಂದು ಆಸ್ಪತ್ರೆಯ ವೈದ್ಯ ಡಾ. ಪ್ರವೀಣ್ ಮಾಳವದೆ (ಅಸೋಸಿಯೇಟ್ ಮೆಡಿಕಲ್ ಡೈರೆಕ್ಟರ್ ಅಂಡ್ ಟ್ರಾನ್ಸ್ ಪ್ಲಾಂಟ್ ಫಿಸಿಷಿಯನ್) ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಹೊಂದಾಣಿಕೆಯಾಗದ ರಕ್ತದ ಗುಂಪಿನ (ಎಬಿಒ ಇನ್‌ಕಂಪ್ಯಾಟಿಬಲ್) ವ್ಯಕ್ತಿಗಳಿಗೆ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಲು ಸಜ್ಜಾಗಿದೆ ಎಂದು ಡಾ. ಪ್ರವೀಣ್ ಮಾಳವದೆ ತಿಳಿಸಿದರು.

ಎನ್‌ಯು ಆಸ್ಪತ್ರೆಯ ಯುರಾಲಜಿಸ್ಟ್ ಮತ್ತು ಟ್ರಾನ್ಸ್‌ಪ್ಲಾಂಟ್ ಶಸ್ತ್ರಚಿಕಿತ್ಸಾ ತಜ್ಞ ಡಾ.ಪ್ರದೀಪ್ ಎಮ್. ಜಿ. ಮಾತನಾಡಿ, ಚಿಕ್ಕ ಮಗುವಿನಿಂದ ಹಿಡಿದು ವೃದ್ಧರವರೆಗೂ ಕಿಡ್ನಿ ಹಾಗೂ ಮೂತ್ರ ರೋಗಗಳ ಸಮಸ್ಯೆ ಇತ್ತೀಚಿನ ದಿನಗಳಲ್ಲಿ ಜಾಸ್ತಿಯಾಗುತ್ತಿದೆ. ಹಾಗಾಗಿ ಇದರ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಮತ್ತು ತಡೆಗಟ್ಟುವಿಕೆ ಹೇಗೆ ಎಂದು ತಿಳಿಸುವುದು ಮುಖ್ಯವಾಗಿದೆ ಎಂದು ಹೇಳಿದರು.

## ನಾಗಮ್ಮರಿಗೆ ವನಿತಾ ಸಾಹಿತ್ಯ ವೇದಿಕೆ ಸಂತಾಪ

ದಾವಣಗೆರೆ, ಮಾ.17- ಮಾಜಿ ಸಚಿವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರ ನಿಧನಕ್ಕೆ ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ನಾಗಮ್ಮ ಅವರು ಜಿಲ್ಲಾ ವನಿತಾ ಸಾಹಿತ್ಯ ವೇದಿಕೆಯನ್ನು 1997ರಲ್ಲಿ ಹುಟ್ಟುಹಾಕಿ ಮಹಿಳಾ ಸಾಹಿತಿಗಳನ್ನು ಒಂದುಗೂಡಿಸಿ ಪ್ರತಿಭಾವಂತ ಮಹಿಳೆ ಯೊಬ್ಬರಿಗೆ ವನಿತ ಸಾಹಿತ್ಯ ಶ್ರೀ ಪ್ರಶಸ್ತಿ ಕೊಟ್ಟು ಪ್ರೋತ್ಸಾಹಿಸುತ್ತಿದ್ದ ಧೀಮಂತ ಮಹಿಳೆ - ಅನನ್ಯ ಸಾಧಕರಾಗಿದ್ದರು ಎಂದು ವೇದಿಕೆ ಕಂಬನಿ ಮಿಡಿದಿದೆ.

ವನಿತಾ ಸಾಹಿತ್ಯ ವೇದಿಕೆಯ ಮಲ್ಲಮ್ಮ ನಾಗರಾಜ್, ಸಂಧ್ಯಾ ಸುರೇಶ್, ಅನ್ನಪೂರ್ಣ ಪಾಟೀಲ್, ಓಂಕಾರಮ್ಮ ರುದ್ರಮುನಿ ಸ್ವಾಮಿ, ಉಮಾದೇವಿ ಮುಂತಾದವರು ನಾಗಮ್ಮನವರ ಅಂತಿಮ ದರ್ಶನ ಪಡೆದು ನಮನ ಸಲ್ಲಿಸಿದರು.

## ಅಂಚೆ ವಿಭಾಗೀಯ ಡಾಕ್ ಅದಾಲತ್

ದಾವಣಗೆರೆ ಮಾ. 17- ಸಾರ್ವಜನಿಕರ ಮತ್ತು ಅಂಚೆ ಗ್ರಾಹಕರ ಅಂಚೆ ಸೇವೆಗಳಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಪಡೆಯಲು ಇದೇ ದಿನಾಂಕ 20 ರಂದು ಸಂಜೆ 4 ಗಂಟೆಗೆ ನಗರದ ಮಂಡಿಪೇಟೆಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಡಾಕ್ ಅದಾಲತ್ ನಡೆಯಲಿದೆ.

# ಮಲೇಬೆನ್ನೂರಿನಲ್ಲಿ ಫ್ಲೆಕ್ಸ್ ತೆರವು ಗೊಳಿಸಲು ಅಡ್ಡಿ : ರಸ್ತೆ ತಡೆ



ಮಲೇಬೆನ್ನೂರು, ಮಾ.17- ಪಟ್ಟಣದಲ್ಲಿ ಗ್ರಾಮದೇವತೆ ಹಬ್ಬಕ್ಕೆ ಸ್ವಾಗತ ಕೋರಿ ಹಾಕಿದ್ದ ಫ್ಲೆಕ್ಸ್‌ಗಳನ್ನು ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಪುರಸಭೆ ಅಧಿಕಾರಿಗಳು ತೆರವುಗೊಳಿಸಲು ಮುಂದಾದಾಗ ಯುವಕರ ಗುಂಪೊಂದು ರಸ್ತೆ ತಡೆ ನಡೆಸಿದ ಘಟನೆ ಭಾನುವಾರ ನಡೆಯಿತು.

ಹಬ್ಬ ಮುಗಿಯುವವರೆಗೆ ಫ್ಲೆಕ್ಸ್‌ಗಳನ್ನು ತೆಗೆಯಬೇಡಿ ಎಂದು ಯುವಕರು ಅಧಿಕಾರಿಗಳಲ್ಲಿ ಮನವಿ ಮಾಡಿದರು. ಇದಕ್ಕೆ ಅಧಿಕಾರಿಗಳು ಒಪ್ಪದಿದ್ದಾಗ ಕೆಲವು ಯುವಕರು ರಸ್ತೆ ತಡೆಗೆ ಮುಂದಾದರು.

ಇದೇ ವೇಳೆ ಸ್ಥಳಕ್ಕೆ ಆಗಮಿಸಿದ ಶಾಸಕ ಬಿ.ಪಿ.ಹರೀಶ್ ಅವರು, ರಾಜಕೀಯ ವ್ಯಕ್ತಿಗಳ ಫೋಟೋ ಇರುವ ಫ್ಲೆಕ್ಸ್‌ಗಳನ್ನು ತೆರವು ಮಾಡಿ, ಯುವಕರ ಫೋಟೋಗಳು ಮಾತ್ರ ಇರುವ ಫ್ಲೆಕ್ಸ್‌ಗಳನ್ನು ಗುರುವಾರದವರೆಗೆ ಉಳಿಸಿ ಎಂದು ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಅವರಿಗೆ ಹೇಳಿದರು.

ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನಾವು ಎಲ್ಲಾ ಫ್ಲೆಕ್ಸ್‌ಗಳನ್ನು ತೆರವು ಮಾಡುತ್ತಿದ್ದೇವೆ. ಸಹಾಯಕ ಚುನಾವಣಾಧಿಕಾರಿಗಳಿಂದ ಫ್ಲೆಕ್ಸ್ ಹಾಕಲು ಅನುಮತಿ ಪತ್ರ ತಂದರೆ ಅವಕಾಶ ಮಾಡಿಕೊಡುತ್ತೇವೆ ಎಂದು ಸುರೇಶ್ ಅವರು, ಹೇಳಿದಾಗ ಆಗ ಹರೀಶ್ ಅವರು, ಚುನಾವಣಾಧಿಕಾರಿಗಳ ಜೊತೆಗೂ ಈ ಬಗ್ಗೆ ಚರ್ಚಿಸಿದಾಗ ಅವರೂ ಕೂಡಾ ಅನುಮತಿ ಕಡ್ಡಾಯ ಎಂಬ ಉತ್ತರ ನೀಡಿದ್ದರಿಂದ ಯುವಕರು ಸುಮ್ಮನಾಗಿ ಫ್ಲೆಕ್ಸ್‌ಗಳನ್ನು ತೆರವುಗೊಳಿಸಿದರು.

**ಡಾಂಬರೀಕರಣಕ್ಕೆ ಆಗ್ರಹ :** ಮಲೇಬೆನ್ನೂರಿನ ಹೆದ್ದಾರಿಯಿಂದ ನಂದಿಗುಡಿ ರಸ್ತೆಗೆ ಡಾಂಬರೀಕರಣ ಮಾಡುವಂತೆ ರಸ್ತೆ ಅಕ್ಕ-ಪಕ್ಕದ ವ್ಯಾಪಾರಿಗಳು ರಸ್ತೆಯಲ್ಲಿ ನಿಂತು ಪ್ರತಿಭಟನೆ ನಡೆಸಿದ ಘಟನೆಯೂ ಭಾನುವಾರ ನಡೆಯಿತು.

ರಸ್ತೆ ಅಕ್ಕ-ಪಕ್ಕ ಚರಂಡಿ ಕಾಮಗಾರಿ ಮುಗಿದಿದೆ. ರಸ್ತೆ ಡಾಂಬರೀಕರಣ ಮಾತ್ರ ಬಾಕಿ ಉಳಿದಿದ್ದು, ಇದರಿಂದಾಗಿ ರಸ್ತೆ ಧೂಳು ಹೆಚ್ಚಾಗಿ ನಮ್ಮ ಆರೋಗ್ಯ ಹದಗೆಟ್ಟಿದೆ ಎಂದು ವ್ಯಾಪಾರಿಗಳು ದೂರಿದರು.

ಸ್ಥಳಕ್ಕೆ ಭೇಟಿ ನೀಡಿದ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಅವರು, ಇದು ಪಿಡಬ್ಲ್ಯೂಡಿ ಇಲಾಖೆಗೆ ಸೇರಿದ ರಸ್ತೆ ಆಗಿರುವುದರಿಂದ ಆ ಇಲಾಖೆಯ ಅಧಿಕಾರಿಗಳು ಜೊತೆ ಮಾತನಾಡಿದ್ದೇನೆ. ಶೀಘ್ರದಲ್ಲೇ ಡಾಂಬರೀಕರಣ ಮಾಡುತ್ತೇವೆಂದು ಹೇಳಿದ್ದಾರೆಂಬ ಉತ್ತರ ನೀಡಿದ ಮೇಲೆ ವ್ಯಾಪಾರಿಗಳು ಸಮಾಧಾನಗೊಂಡರು.

# ಸೋಮಾಲಿ ಕಡಲ್ಗಳ್ಳರ ವಿರುದ್ಧ ಬೃಹತ್ ಕಾರ್ಯಾಚರಣೆ ಹಡಗು, ಒತ್ತೆಯಾಳುಗಳ ಬಿಡುಗಡೆ ಮಾಡಿದ ನೌಕಾ ದಳ

ನವದೆಹಲಿ, ಮಾ. 17 – ಸೋಮಾಲಿ ಕಡಲ್ಗಳ್ಳರು ಮೂರು ತಿಂಗಳಿನಿಂದ ಹೈಜಾಕ್ ಮಾಡಿದ್ದ ಸರಕು ಸಾಗಣೆ ಹಡಗೊಂದನ್ನು ಭಾರತೀಯ ನೌಕಾ ದಳ ಮುಕ್ತಗೊಳಿಸಿದೆ. ಬೃಹತ್ ಕಾರ್ಯಾಚರಣೆ ಮೂಲಕ ಈ ಯಶಸ್ಸು ಕಾಣಲಾಗಿದೆ.

ಸುಮಾರು 40 ಗಂಟೆ ಕಾಲ ನಡೆದ ಕಾರ್ಯಾಚರಣೆಯಲ್ಲಿ ಮಾಲ್ಟೀಸ್ ಧ್ವಜ ಹೊಂದಿದ್ದ ಹಡಗಿನಲ್ಲಿ 17 ಒತ್ತೆಯಾಳುಗಳನ್ನು ರಕ್ಷಿಸಲಾಗಿದೆ. ಈ ಹಡಗಿನಲ್ಲಿದ್ದ 35 ಸಶಸ್ತ್ರ ಕಡಲ್ಗಳ್ಳರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ಭಾರತದ ಕರಾವಳಿಯಿಂದ 2,600 ಕಿ.ಮೀ. ದೂರದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ. ಕಳೆದ ಏಳು ವರ್ಷಗಳಲ್ಲಿ ಸೋಮಾಲಿ ಕಡಲ್ಗಳ್ಳರಿಂದ ಸರಕು ಹಡಗೊಂದನ್ನು ಯಶಸ್ವಿಯಾಗಿ ವಾಪಸ್ ಪಡೆದಿರುವುದು ಇದೇ ಮೊದಲು ಎಂದು ಪರಿಣಿತರು ತಿಳಿಸಿದ್ದಾರೆ.

ಯಶಸ್ವೀ ಕಾರ್ಯಾಚರಣೆ ನಡೆಸಿ ಹೈಜಾಕ್ ಮಾಡಲಾಗಿದ್ದ ಹಡಗು ಹಾಗೂ ಸಿಬ್ಬಂದಿಯನ್ನು ರಕ್ಷಿಸಿದ್ದಕ್ಕಾಗಿ ಬಲ್ಗೇರಿಯಾದ ವಿದೇಶಾಂಗ ಸಚಿವೆ ಮಾರಿಯಾ ಗೇಬ್ರಿಯಲ್ ಅವರು ಧನ್ಯವಾದ ಸಲ್ಲಿಸಿದ್ದಾರೆ. ಒತ್ತೆಯಾಳಾಗಿದ್ದವರಲ್ಲಿ ಏಳು ಜನ ಬಲ್ಗೇರಿಯಾದವರಿದ್ದರು.

ಸೋಮಾಲಿ ಕಡಲ್ಗಳ್ಳರು ಕಳೆದ ಡಿಸೆಂಬರ್ 14ರಂದು ಈ ಹಡಗನ್ನು ವಶಕ್ಕೆ ತೆಗೆದುಕೊಂಡಿದ್ದರು. ಇವರ ರಕ್ಷಣೆಗಾಗಿ 'ಸಂಕಲ್ಪ್' ಎಂಬ ಹೆಸರಿನ ಕಾರ್ಯಾಚರಣೆ ನಡೆಸಲಾಗಿತ್ತು. ಈ ಹಡಗಿನಲ್ಲಿ 37,800 ಟನ್ ಮೌಲ್ಯದ ಸುಮಾರು ಹತ್ತು ಲಕ್ಷ ಡಾಲರ್ ಮೊತ್ತದ ಸರಕಿತ್ತು. ಇದನ್ನು ಸುರಕ್ಷಿತವಾಗಿ ಭಾರತಕ್ಕೆ ತರಲಾಗಿದೆ.

# ಲಂಕಾ ನೌಕಾ ದಳದಿಂದ ಭಾರತದ 21 ಬೆಸ್ತರ ಬಂಧನ

ಕೊಲಂಬೊ, ಮಾ. 17 – ಶ್ರೀಲಂಕಾದ ನೌಕಾ ದಳ 21 ಭಾರತೀಯರನ್ನು ಬಂಧಿಸಿದೆ. ನೌಕಾ ಗಡಿ ಉಲ್ಲಂಘಿಸಿದ ಆರೋಪದ ಮೇಲೆ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಜಾಫ್ನಾದ ಬಳಿ ಬೆಸ್ತರನ್ನು ಬಂಧಿಸಲಾಗಿದೆ. ಅವರ ಎರಡು ದೋಣಿಗಳನ್ನೂ ಸಹ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಕಳೆದ ಶುಕ್ರವಾರದಂದು ಕರೈನಗರ ಕರಾವಳಿಯಲ್ಲಿ 15 ಬೆಸ್ತರನ್ನು ಬಂಧಿಸಲಾಗಿತ್ತು. ಈ ವರ್ಷ 146 ಭಾರತೀಯ ಬೆಸ್ತರನ್ನು ಬಂಧಿಸಲಾಗಿದೆ.

# ಹರಿಹರದಲ್ಲಿ ಇಂದು ಕದಳಿ ಮಹಿಳಾ ವೇದಿಕೆಯಿಂದ ಮಹಿಳಾ ದಿನಾಚರಣೆ

ಹರಿಹರ ತಾಲ್ಲೂಕು ಕದಳಿ ಮಹಿಳಾ ವೇದಿಕೆಯ ನೂತನ ಪದಾಧಿಕಾರಿಗಳ ಸೇವಾ ದೀಕ್ಷೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮ ಎಚ್.ಕೆ.ವಿ. ಸಮುದಾಯ ಭವನದಲ್ಲಿ ಸಂಜೆ 4 ಕ್ಕೆ ಇಂದು ನಡೆಯಲಿದೆ.

ಲಿಂ. ಶಾಂತಮ್ಮ ನಿಂಗಪ್ಪ ಮತ್ತು ಲಿಂ. ನಿಂಗಪ್ಪ ನಾರವ್ವರ ದತ್ತಿ ದಾನಿಗಳಾದ ಹರಿಹರದ ಶ್ರೀಮತಿ ಮಂಜುಳ ನಾರಪ್ಪ ನಡೆಸಿಕೊಡಲಿದ್ದಾರೆ.

ಕೆ.ಬಿ. ಪರಮೇಶ್ವರಪ್ಪ ಉದ್ಘಾಟಿಸುವರು. ಹುಲಿಕಟ್ಟೆ ಚನ್ನಬಸಪ್ಪ ಅಧ್ಯಕ್ಷತೆ ವಹಿಸುವರು. ಸುಮತಿ ಜಯ್ಯಪ್ಪ ವಚನ ಸಾಹಿತ್ಯದಲ್ಲಿ ಮಹಿಳಾ ಅಸ್ಮಿತೆ ವಿಷಯ ಕುರಿತು ಮಾತನಾಡುವರು. ಗಾಯತ್ರಿ ವಸ್ತ್ರದ್ ಸೇವಾ ದೀಕ್ಷೆ ಬೋಧಿಸುವರು. ಹರಿಹರ ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ರೂಪಾ ನಾಗರಾಜ್ ಕುರುವತ್ತಿ ಸೇವಾ ದೀಕ್ಷೆ ಸ್ವೀಕಾರ, ಹೆಚ್.ಕೆ. ಅನುಸೂಯ ಶಿವಣ್ಣ ಅವರಿಂದ ಸನ್ಮಾನ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಮಮತ ನಾಗರಾಜ್, ಡಾ. ಪ್ರತಿಮಾ ನಿಜಗುಣ ಶಿವಯೋಗಿ, ಅಂಬಿಕ ಬಿ.ಎಸ್., ಗೌರಮ್ಮ ಶ್ರೀನಿವಾಸ್ ಕೆ.ಆರ್. ಮತ್ತು ಹರಿಹರ ತಾಲ್ಲೂಕು ಕದಳಿ ಮಹಿಳಾ ವೇದಿಕೆ ಸದಸ್ಯರಿಂದ ವಚನ ಗಾಯನ ನಡೆಯಲಿದೆ.

## ರಾಣೇಬೆನ್ನೂರಿನಲ್ಲಿಂದು ಹೃದಯ ತಪಾಸಣೆ



ಕಾಕಿ ಜನಸೇವಾ ಸಂಸ್ಥೆ, ಜೆಸಿ, ವರ್ತಕರ ಸಂಘ ಮತ್ತು ಕನ್ನಡ ಸಂಘಗಳು ಸೇರಿ ಇಂದು ಪುನೀತ್ ಹುಟ್ಟು ಹಬ್ಬವನ್ನು ಹೃದಯ ತಪಾಸಣೆ ಶಿಬಿರದೊಂದಿಗೆ ಆಚರಿಸುತ್ತಿದ್ದಾರೆ.

## ತಾರೇಹಳ್ಳಿಯಲ್ಲಿ ನಾಡಿದ್ದು ರಥೋತ್ಸವ

ಜಗಳೂರು ತಾಲ್ಲೂಕಿನ ತಾರೇಹಳ್ಳಿ ಗ್ರಾಮದಲ್ಲಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ಮಹಾರಥೋತ್ಸವವು ಇದೇ ದಿನಾಂಕ 20ರ ಬುಧವಾರ ಸಂಜೆ 6.30ಕ್ಕೆ ನಡೆಯಲಿದೆ. ರಥೋತ್ಸವದ ಪ್ರಯುಕ್ತ ಇಂದು ಗಜ ವಾಹನ ಉತ್ಸವ, ನಾಳೆ ಮಂಗಳವಾರ ಗರುಡ ವಾಹನ ಉತ್ಸವ, ದಿನಾಂಕ 21ರ ಗುರುವಾರ ಅನ್ನ ಸಂತರ್ಪಣೆ, ದಿನಾಂಕ 22ರ ಶುಕ್ರವಾರ ಓಕುಳಿ ಉತ್ಸವ ಜರುಗಲಿದೆ.

# ಹೊನ್ನಾಳಿ : ಬಿ.ಎಸ್.ವೈ. ನೇತೃತ್ವದಲ್ಲಿ ಜಿಲ್ಲೆಯ ಸಮಸ್ಯೆ ಶೀಘ್ರ ಇತ್ಯರ್ಥ



ಹೊನ್ನಾಳಿ, ಮಾ. 17- ವಿಪಕ್ಷ ನಾಯಕ ಆರ್.ಅಶೋಕ್, ಜಿಲ್ಲಾ ಉಸ್ತುವಾರಿಗಳು ಮತ್ತು ಸ ಮಾ ಜ ದ ಮುಖಂಡರಾದ ಭೈರತಿ ಬಸವರಾಜ್ ಮತ್ತಿತರೆ ಪ್ರಮುಖರು ಈ ಹಿಂದೆ ಪಕ್ಷಕ್ಕಾಗಿ ದುಡಿದಿದ್ದೀರಿ ಮತ್ತೆ ತಾವು ಪಕ್ಷಕ್ಕೆ ಮರಳಬೇಕೆಂದು ಕರೆ ನೀಡಿದ್ದರ ಹಿನ್ನೆಲೆಯಲ್ಲಿ ಶುಕ್ರವಾರ ದಾವಣಗೆರೆ ಕಾರ್ಯಕ್ರಮದಲ್ಲಿ ಬಿಜೆಪಿಗೆ ಮರಳಿದ್ದಾಗಿ ಜಿ.ಪಂ. ಮಾಜಿ ಸದಸ್ಯ ಎಂ. ಆರ್.ಮಹೇಶ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಶಾಸಕರು ತಮ್ಮ ಬೆಂಬಲಿಗರ ಮೂಲಕ ನಾನು ವಿಧಾನಸಭಾ ಕ್ಷೇತ್ರದ ಪ್ರತಿಸ್ಪರ್ಧಿಯಾಗುತ್ತೇನೆ ಎಂಬ ಕಾರಣಕ್ಕೆ ಬಿಜೆಪಿ ಮುಖಂಡರುಗಳಿಂದ ಪಕ್ಷ ಬಿಡುವಂತೆ ತೇಜೋವಧೆ ಮಾಡಿದ್ದು, ನನ್ನನ್ನು ಪಕ್ಷದಲ್ಲಿ ಸರಿಯಾಗಿ ನಡೆಸಿಕೊಳ್ಳದ ಕಾರಣ ಅನಿವಾರ್ಯ ಕಾರಣಗಳಿಂದ ಪಕ್ಷ ತೊರೆಯಬೇಕಾಗಿ ಬಂದಿದ್ದು, ಇದೀಗ ದೇಶಕ್ಕಾಗಿ, ಮೋದಿಯವರಿಗಾಗಿ ಮತ್ತೆ ಪಕ್ಷ ಸೇರಿದ್ದೇನೆ ಎಂದರು.

ಸಂಸದ ಜಿ.ಎಂ.ಸಿದ್ದೇಶ್ವರ ಅವರಿಗೆ ಲೋಕಸಭಾ ಟಿಕೆಟ್ ತಪ್ಪಿಸುವ ನಿಟ್ಟಿನಲ್ಲಿ ತಾಲ್ಲೂಕಿನಲ್ಲಿ ಕೆಲವರು ಗೊಂದಲ ಸೃಷ್ಟಿ ಮಾಡುತ್ತಾ ಗುಂಪುಗಾರಿಕೆ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಈಗಾಗಲೇ ಯಾರೋ ಮಾಡಿದ ತಪ್ಪಿಗೆ ತಾಲ್ಲೂಕಿನಲ್ಲಿ ಬಿಜೆಪಿ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದು, ಯಾವುದೇ ಕಾರಣಕ್ಕೂ ಲೋಕಸಭಾ ಕ್ಷೇತ್ರವೂ ಕೈ ತಪ್ಪದಂತೆ ನೋಡಿಕೊಳ್ಳಬೇಕಿದೆ ಎಂದು ಹೇಳಿದರು.

ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷ ಎ.ಬಿ. ಹನುಮಂತಪ್ಪ ಮಾತನಾಡಿ, ಬರುವ ಬುಧವಾರ ಪಟ್ಟಣದಲ್ಲಿ ಪಕ್ಷದ ಕಚೇರಿ ಉದ್ಘಾಟನೆಯನ್ನು ಲೋಕಸಭಾ ಚುನಾವಣಾ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ನೆರವೇರಿಸಲಿದ್ದು, ಜಿಲ್ಲೆಯಲ್ಲಿ ಇರುವ ಗೊಂದಲಗಳನ್ನು ಇನ್ನು 2-3 ದಿನಗಳಲ್ಲಿ ಬಿ.ಎಸ್. ಯಡ್ಯೂರಪ್ಪ ಅವರ ನೇತೃತ್ವದಲ್ಲಿ ಸಭೆ ಕರೆದು ಸಮಸ್ಯೆ ಬಗೆಹರಿಸಿ ಎಲ್ಲಾ ಗೊಂದಲಗಳಿಗೆ ಇತಿಶ್ರೀ ಹಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಜಿ.ಪಂ. ಮಾಜಿ ಉಪಾಧ್ಯಕ್ಷ ಕೆ.ವಿ. ಚನ್ನಪ್ಪ ಮಾತನಾಡಿ, ನಾಳೆ ದಿನಾಂಕ 18 ರಂದು ಶಿವಮೊಗ್ಗ ನಗರದಲ್ಲಿ ನಡೆಯುವ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಆಗಮಿಸಲಿದ್ದು, ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕಿನ ಬಿಜೆಪಿ ಕಾರ್ಯಕರ್ತರಿಗೆ 100 ವಾಹನಗಳ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜಣ್ಣ, ಚನ್ನೇಶ್ ಮತ್ತಿತರರು ಉಪಸ್ಥಿತರಿದ್ದರು.

# ಹಡಗಲಿ, ಪತಂಜಲಿ ಟ್ರಸ್ಟ್‌ನಿಂದ ವಿಶ್ವ ಮಹಿಳಾ ದಿನಾಚರಣೆ : ಸನ್ಮಾನ



ಹೂವಿನಹಡಗಲಿ,ಮಾ.17- ಇಲ್ಲಿನ ಪತಂಜಲಿ ಯೋಗ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕಿ ಹಾಗೂ ತಾಲ್ಲೂಕು ಕಸಾಪ ಮಾಜಿ ಅಧ್ಯಕ್ಷರಾದ ಶ್ರೀಮತಿ ಕೌಶಲ್ಯ ದೇವೇಂದ್ರ ನಾಯ್ಕ ಅವರನ್ನು ಸನ್ಮಾನಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಟ್ರಸ್ಟ್ ಅಧ್ಯಕ್ಷರಾದ ಡಾ.ಲಕ್ಷ್ಮಣ ಲಮಾಣಿ ವಹಿಸಿದ್ದರು. ಉಪಾಧ್ಯಕ್ಷ ಕುರ್ಡೇಕರ್ ನಾಗರಾಜ್, ಕಾರ್ಯದರ್ಶಿ ಲೋಕೇಶಣ್ಣ, ಖಜಾಂಚಿ ಕೆ.ಮಾಲತೇಶ್ ಹಾಗೂ ಟ್ರಸ್ಟ್‌ನ ಮಹಿಳಾ ಅಧ್ಯಕ್ಷರಾದ ಶ್ರೀಮತಿ ಇಂದುಮತಿ ಲಕ್ಷ್ಮಣನಾಯ್ಕ, ಶ್ವೇತಾ ಬೀರಬ್ಬಿ ಮಹೇಶ್ ಉಪಸ್ಥಿತರಿದ್ದರು.

# ಕುಂಬಾರ ಅಭಿವೃದ್ಧಿ ಮಂಡಳಿ ಉನ್ನತಿಗೆ ಯೋಜನೆ ರೂಪಿಸಲು ಒತ್ತಾಯ

## ಹರಿಹರದಲ್ಲಿನ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ದಾವಣಗೆರೆ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕ ಡಾ. ರವಿ ಕುಂಬಾರ್



ಹರಿಹರ, ಮಾ. 17- ಕುಂಬಾರ ಅಭಿವೃದ್ಧಿ ಮಂಡಳಿಗೆ ಅಧ್ಯಕ್ಷರು ಮತ್ತು ಅನುದಾನ ನೀಡುವ ಮೂಲಕ ಸಮುದಾಯದ ಉನ್ನತಿಗೆ ಕಾರ್ಯಕ್ರಮ ರೂಪಿಸಬೇಕೆಂದು ದಾವಣಗೆರೆ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕ ಡಾ. ರವಿ ಕುಂಬಾರ್ ಹೇಳಿದರು.

ತಾಲ್ಲೂಕು ಆಡಳಿತ ಮತ್ತು ಕುಂಬಾರ ಸಮಾಜದ ಸಂಯುಕ್ತ ಆಶ್ರಯದಲ್ಲಿ ನಗರದ ಕುಂಬಾರ ಓಣಿ ಹತ್ತಿರ ಬಸವೇಶ್ವರ ಮಂದಿರದಲ್ಲಿ ನಡೆದ ಕವಿ ಸರ್ವಜ್ಞ ಜಯಂತಿಯಲ್ಲಿ ಅವರು ಮಾತನಾಡಿದರು.

ಕಳೆದ ಒಂದು ವರ್ಷದ ಹಿಂದೆ ಸ್ಥಾಪಿಸಲಾದ ಕುಂಬಾರ ಅಭಿವೃದ್ಧಿ ಮಂಡಳಿ ಇನ್ನೂ ಕಾರ್ಯಾಚರಣೆ ಮಾಡದೇ ಜನಾಂಗಕ್ಕೆ ತೊಂದರೆಯಾಗಿದೆ. ಅನುದಾನದ ಜತೆಗೆ ಅಧ್ಯಕ್ಷರನ್ನು ನೇಮಿಸಬೇಕೆಂದರು.

ಸರ್ವಜ್ಞರ ತತ್ವ ಮತ್ತು ಆದರ್ಶಗಳನ್ನು ಜನತೆ ರೂಢಿಸಿಕೊಂಡು ಮುನ್ನಡೆ ಸಾಧಿಸಬೇಕಿದ್ದು, ಕಾರ್ಯಕ್ರಮದ ಮೂಲಕ ಒಗ್ಗಟ್ಟು ಪ್ರದರ್ಶಿಸಬೇಕಾಗಿದೆ. 2ಎ ನಲ್ಲಿ ಒಳ ಮೀಸಲಾತಿ ಕಲ್ಪಿಸುವ ಮೂಲಕ ಪ್ರತ್ಯೇಕ ಕ್ಯಾಟಗರಿ ಮಾಡಬೇಕಿದ್ದು, ತಾಲ್ಲೂಕಿಗೊಂದು ಸರ್ವಜ್ಞ ಭವನ ನಿರ್ಮಾಣ ಆಗಬೇಕು. ಕಲ್ಲಂದೂರಿನಲ್ಲಿ ಮಣ್ಣಿನ ಉತ್ಪನ್ನಗಳನ್ನು ತಯಾರಿ ಮಾಡುವ ಕಲಾ ಕೇಂದ್ರವನ್ನು ಸ್ಥಾಪನೆ ಮಾಡಲಾಗಿದೆ. ಉಚಿತ ವಸತಿ ಸಹಿತ ಸ್ಟೈಫಂಡ್ ಜತೆಗೆ ತರಬೇತಿ ನೀಡಲಾಗುತ್ತದೆ ಎಂದರು.

ತಯಾರಿಸಲಾದ ಮಡಿಕೆ, ಕುಡಿಕೆ ಮತ್ತು ಕಲಾಕೃತಿಗಳಿಗೆ ಅಂತರರಾಷ್ಟ್ರೀಯ ಮಟ್ಟದ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗುವುದು. ಈ ಸಂಬಂಧ ಕಲಿಕೆಯಲ್ಲಿ ಆಸಕ್ತಿ ಇರುವ ಯುವಶಕ್ತಿಗೆ ಶೀಘ್ರದಲ್ಲೇ ಕಾರ್ಯಾಗಾರ ನಡೆಸುವ ಮೂಲಕ ಸ್ವಯಂ ಉದ್ಯೋಗ ಸಾಧಿಸಲು ಅಗತ್ಯ ನೆರವು ನೀಡಲಾಗುವುದೆಂದು ಡಾ. ರವಿ ಕುಂಬಾರ್ ತಿಳಿಸಿದರು.

ದಾವಣಗೆರೆ ವಿಶ್ವವಿದ್ಯಾಲಯ ಆಹಾರ ತಂತ್ರಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ ಡಾ. ಎಂ. ಪರಮೇಶ್ ಸಹ ಸರ್ವಜ್ಞನ ತತ್ವಗಳ ಆಧಾರಿತವಾಗಿ ಕೆಲವೊಂದು ವಚನಗಳನ್ನು ಹೇಳಿದರು. ನಿವೃತ್ತ ಪ್ರಾಚಾರ್ಯ ಕೆ. ಸಿದ್ದಪ್ಪ ಉಪನ್ಯಾಸ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಶಾಸಕ ಬಿ.ಪಿ. ಹರೀಶ್ ಅವರು ಸರ್ವಜ್ಞನ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರು.

ಹರಿಹರ ತಾಲ್ಲೂಕು ಕುಂಬಾರ ಯುವ ಸೈನ್ಯದ ಅಧ್ಯಕ್ಷ ಚಂದ್ರಶೇಖರ್ ಕುಂಬಾರ್ ಅವರು, ತ್ರಿಪದಿ ವಚನಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿದ ಸರ್ವಜ್ಞನ ಕುರಿತು ಮಾತನಾಡಿದರು.

ಜಿಲ್ಲಾಧ್ಯಕ್ಷ ಪುಷ್ಪರಾಜ್, ಹರಿಹರ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್, ಭರಮಪುರ ಗಣೇಶ್, ಮಲ್ಲಿಕಾರ್ಜುನ್ ಬಾಬು, ಈರಪ್ಪ ಕುಂಬಾರ್, ಸಂದಿ ಮನೆ ಮಲ್ಲಿಕಾರ್ಜುನ್, ಹಾಲೇಶಪ್ಪ, ಮುರುಗೇಶ್, ಕರಿಬಸಪ್ಪ, ತಿಪ್ಪೇಸ್ವಾಮಿ, ನಿಟ್ಟೂರ್ ಕಾಂತರಾಜ್, ಭೀಮ್ ನಗರ ರಾಜಣ್ಣ ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು.

# ಲೋಕಸಭೆ ಚುನಾವಣೆ ಬಿಸಿ, ಬರದ ಬೇಗೆಯಲಿ...

# ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಗೆ ಸಜ್ಜಾದ ದೇವನಗರಿ



ಭಾನುವಾರ ಹರಕೆ ಕೋಣದೊಂದಿಗೆ 'ಸಾರು' ಹಾಕುವ ಮೂಲಕ ದುಗ್ಗಮ್ಮನ ಜಾತ್ರೆಗೆ ಚಾಲನೆ ದೊರೆತಿದೆ. ಹಬ್ಬದ ವಿಧಿ-ವಿಧಾನಗಳು, ಪದ್ಧತಿ ಪ್ರಕಾರ ಆರಂಭವಾಗಿವೆ. ಮಹಾಪೂಜೆ ಕೈಂಕರ್ಯದ 'ಪಾಲುದಾರರು' ಜಾತ್ರೆಯ ಸಿದ್ಧತೆಯಲ್ಲಿ ತೊಡಗಿಕೊಂಡಿದ್ದಾರೆ.

*ದುಗ್ಗಮ್ಮನ ಜಾತ್ರೆಗೆ ಸಜ್ಜಾಗುತ್ತಿದೆ ದೇವನಗರಿ. ವಸಂತ ಋತುವಿನ ಆಗಮನದ ಜತೆ ಬಯಲು ಸೀಮೆಯಲ್ಲಿ ಜಾತ್ರೆಗಳ ಸುಗ್ಗಿಯೂ ಗರಿಗೆದರುತ್ತದೆ. ದಾವಣಗೆರೆಯ ಸುಪ್ರಸಿದ್ಧ ದುಗ್ಗಮ್ಮ ದೇವಿ ಜಾತ್ರೆ ಈ ಬಾರಿ ಮಾರ್ಚ್ 19 ಮತ್ತು 20 ರಂದು ನಿಗದಿಯಾಗಿದೆ. ಇನ್ನು ಜಾತ್ರೆ ಹಿನ್ನೆಲೆ ಕುರಿ ಕಾಳಗ, ಕುಸ್ತಿ ಪಂದ್ಯಗಳನ್ನು ಆಯೋಜಿಸಲಾಗಿದೆ.*



**ಉತ್ತಂಗಿ ಕೊಟ್ರೇಶ್**

ದೇವಾಲಯಗಳ ನಗರವೆಂದೇ ಹೆಸರಾಗಿರುವ ಮಧ್ಯ ಕರ್ನಾಟಕದ ವಾಣಿಜ್ಯ ಕೇಂದ್ರ ದಾವಣಗೆರೆಯಲ್ಲೀಗ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯ ಸಡಗರ - ಸಂಭ್ರಮ ಮನೆ ಮಾಡಿದೆ. ಜೊತೆಗೆ ಲೋಕಸಭಾ ಚುನಾವಣಾ ಕಾವು ಏರತೊಡಗಿದೆ.

ಇಡೀ ನಾಡಿಗೇ ಬರ ಬಂದಿರಬಹುದು. ಮಳೆ, ಬೆಳೆಯಿಲ್ಲದೇ, ರೈತರು ಸುಗ್ಗಿ ಕಾಣದಿರಬಹುದು. ಕುಡಿಯುವ ನೀರಿಗೂ ಹಪಹಪಿಸುವ ಕಾಲ ಬಂದಿದ್ದರೂ 'ಭಕ್ತಿಗೆ ಬರ ಇಲ್ಲ' ಎನ್ನುವಂತೆ ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಅದ್ಧೂರಿ ಜಾತ್ರೆಯನ್ನು ಕಣ್ತುಂಬಿಕೊಳ್ಳುವಲ್ಲಿ ಜನತೆ ಕಾತುರರಾಗಿದ್ದಾರೆ.

ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಸ್ವಾಗತ ಕೋರುವ ಫ್ಲೆಕ್ಸ್‌ಗಳು ಎಲ್ಲೆಲ್ಲೂ ರಾರಾಜಿಸತೊಡಗಿವೆ. ವಿವಿಧ ಪಕ್ಷಗಳ ಮುಖಂಡರು, ಕಾರ್ಯ ಕರ್ತರು, ವರ್ತಕರು, ಭಕ್ತರು ತಮ್ಮ ತಮ್ಮ ಭಾವಚಿತ್ರಗಳನ್ನು ಹಾಕಿಕೊಂಡು ಸ್ವಾಗತ ಕೋರುವ ದೊಡ್ಡ-ದೊಡ್ಡ ಫ್ಲೆಕ್ಸ್‌ಗಳು ನಗರದ ಆಯಕಟ್ಟಿನ ಸ್ಥಳಗಳಲ್ಲಿ ಕಂಡುಬರುತ್ತಿವೆ. ಫ್ಲೆಕ್ಸ್‌ಗಳಿಗೀಗ ಚುನಾವಣಾ ನೀತಿ ಸಂಹಿತೆಯೂ ಕಾಡಬಹುದು.

ದುಗ್ಗಮ್ಮನ ಗುಡಿ ಇರುವ ಶಿವಾಜಿನಗರದಲ್ಲಿ ಸಂಭ್ರಮ ಮನೆ ಮಾಡಿದೆ. ಹಳೇಪೇಟೆ ಅಥವಾ ದುಗ್ಗಮ್ಮನಪೇಟೆ ಎಂದರೆ ಅದು ಸಾಲು-ಸಾಲು ದೇವಾಲಯಗಳ ಸಂಗಮ ಕೇಂದ್ರ. ಅನೇಕ ಪುರಾತನ ದೇವಾಲಯಗಳು ಇಲ್ಲಿ ನೆಲೆಗೊಂಡಿವೆ. ನಿತ್ಯವೂ ಒಂದಿಲ್ಲೊಂದು ದೇವಸ್ಥಾನದಲ್ಲಿ ಪೂಜಾ ಕಾರ್ಯಗಳು ಶ್ರದ್ಧಾ ಭಕ್ತಿಯಿಂದ ನಡೆಯುತ್ತವೆ. ಹಾಗಾಗಿ ದಾವಣಗೆರೆಯು ದೇವಾಲಯಗಳ ನಗರವೆಂಬ ಹೆಗ್ಗಳಿಕೆಗೆ ಪಾತ್ರವಾಗುವಲ್ಲಿ ಈ ಭಾಗದ ಜನತೆಯ ಭಕ್ತಿಯ ಕಾಣಿಕೆ ಅಪಾರ.

ಹಬ್ಬದ ಸಂಭ್ರಮ ಈಗಾಗಲೇ ಹಳೇ ನಗರದ ಕಳೆಯನ್ನು ಹೆಚ್ಚಿಸಿದೆ. ಮನೆಗಳು ಸುಣ್ಣ-ಬಣ್ಣ ಕಂಡಿವೆ. ಇಲ್ಲಿನ ವೃತ್ತಗಳು ಬಣ್ಣ ಮತ್ತು ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸತೊಡಗಿವೆ. ಸಿದ್ಧತೆಗಳು ಅಂತಿಮ ಘಟ್ಟ ತಲುಪಿದ್ದು, ವಿಶೇಷ ಪೂಜೆ ಮತ್ತು ಮಹಾ ಪೂಜೆಯನ್ನು ಕಣ್ತುಂಬಿಕೊಳ್ಳಲು ಕಾತುರದಿಂದ ಕಾಯುತ್ತಿದ್ದಾರೆ.

ಎರಡು ವರ್ಷಕ್ಕೊಮ್ಮೆ ಆಚರಿಸಲಾಗುವ ಈ ಹಬ್ಬಕ್ಕೆ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಿಂದ, ಪಕ್ಕದ ರಾಜ್ಯಗಳಿಂದಲೂ ಸಹ ಭಕ್ತಾದಿಗಳು ಆಗಮಿಸಿ ಅಮ್ಮನ ದರ್ಶನ ಪಡೆದು, ಹರಕೆಗಳನ್ನು ತೀರಿಸಿ ಕೃತಾರ್ಥರಾಗುತ್ತಾರೆ.

ದೇವಸ್ಥಾನದ ಮುಂಭಾಗದಲ್ಲಿ ಭವ್ಯ ಮಹಾಮಂಟಪ ಆಕರ್ಷಕವಾಗಿ ನಿರ್ಮಾಣಗೊಂಡಿದೆ. ವಿದ್ಯುತ್ ದೀಪಾಲಂಕಾರ ಮತ್ತು ಅಮ್ಮನ ದರ್ಶನ ಪಡೆಯಲು ಅನುವಾಗುವಂತೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ದೇವಸ್ಥಾನದ ಸುತ್ತ ಉರುಳುಸೇವೆ, ದೀಡು ನಮಸ್ಕಾರ ಹಾಕಿ ಹರಕೆ ಸಲ್ಲಿಸುವ ಭಕ್ತಾದಿಗಳಿಗೆ ಅಗತ್ಯವಾದ ಎಲ್ಲ ಅನುಕೂಲಗಳನ್ನು ದೇವಸ್ಥಾನ ಸಮಿತಿ ಮಾಡಿದೆ.

ಭಾನುವಾರ 'ಸಾರು' ಹಾಕುವುದರೊಂದಿಗೆ ಹಬ್ಬದ ವಿಶೇಷ ಪೂಜಾ ಕೈಂಕರ್ಯಗಳು ವಿಧ್ಯುಕ್ತವಾಗಿ ಆರಂಭವಾಗಿವೆ. ಪದ್ಧತಿ ಪ್ರಕಾರ ಗೌಡರ ಮನೆ, ಬಣಕಾರ ಮನೆ, ಪುರುವಂತರ ಮನೆ, ತಳವಾರರ ಮನೆ, ಹಟ್ಟೇರ ಮನೆ, ಕಳಸಪ್ಪನವರ ಮನೆ ಸೇರಿದಂತೆ ನೇಮ ಇರುವ ಮನೆಗಳಿಗೆ ಪೂಜೆಗಾಗಿ, ಹರಕೆಯ ಕೋಣವನ್ನು ಕರೆದೊಯ್ಯಲಾಗುತ್ತಿದೆ. ಈ 'ಸಾರು' ಹಾಕುವ ಕಾರ್ಯ ಪದ್ಧತಿ ಪ್ರಕಾರವೇ ನಡೆಯಬೇಕು. ಮಾರ್ಗ ಬದಲಿಸುವಂತಿಲ್ಲ ಎಂಬುದು ಹಿಂದಿನಿಂದಲೂ ನಡೆದು ಬಂದಿರುವ ಪದ್ಧತಿ.

'ಸಾರು' ಹಾಕಿದ ನಂತರ ಊರಿನ ಗಡಿಯೊಳಗೆ ಪರಸ್ಥಳದಿಂದ ಯಾರೂ ಬರುವಂತಿಲ್ಲ. ಹಾಗೆಯೇ ಇಲ್ಲಿಂದ ಗಡಿ ದಾಟಿ ಹೊರ ಹೋಗುವುದು ನಿಷಿದ್ಧ ಎಂಬ ಕಟ್ಟುಪಾಡು ಹಿಂದಿನಿಂದಲೂ ಇದೆ. ಈ ಕಾರಣಕ್ಕೆ ಈಗಲೂ ಬಹಳಷ್ಟು ಭಕ್ತರು ಭಾನುವಾರದ ಒಳಗಾಗಿಯೇ ಊರಿಗೆ ಆಗಮಿಸಿ ಬಂಧುಗಳು ಮತ್ತು ನೆಂಟರಿಷ್ಟರ ಮನೆಯಲ್ಲಿ ಅಥವಾ ವಸತಿ ಗೃಹಗಳಲ್ಲಿ, ದೇವಸ್ಥಾನ ಸಮಿತಿ ವ್ಯವಸ್ಥೆ ಮಾಡಿರುವ ಸ್ಥಳಗಳಲ್ಲಿ ತಂಗುತ್ತಾರೆ.

ಯುವ ಪೀಳಿಗೆಯಲ್ಲಿನ ಧಾರ್ಮಿಕ ಮನೋಭಾವ ಬದಲಾದಂತೆ ಹಬ್ಬದ ಪುರಾತನ ಪದ್ಧತಿ, ಆಚರಣೆಗಳೂ ಸಹ ಬಹಳಷ್ಟು ಬದಲಾವಣೆ ಕಾಣುತ್ತಾ ಸಾಗಿವೆ. ಆದರೆ ಅಮ್ಮನ ಮೇಲಿನ ಭಯ-ಭಕ್ತಿ, ನಂಬಿಕೆ ಕೊಂಚವೂ ಬದಲಾಗಿಲ್ಲ. ಬದಲಾಗಿ ಭಕ್ತರ ಸಂಖ್ಯೆ ಮತ್ತು ವ್ಯಾಪ್ತಿ ವಿಸ್ತರಿಸುತ್ತಲೇ ಸಾಗಿದೆ.

ನಗರದೇವತೆ ಜಾತ್ರೆ ಜೊತೆಗೆ ಅಮ್ಮನ ದೇವಸ್ಥಾನಗಳಿರುವ ನಗರದ ಅನೇಕ ಕಡೆ ವಿವಿಧ ದೇವತೆಗಳ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನೆರವೇರುತ್ತವೆ. ಅದರಲ್ಲಿ ವಿನೋಬನಗರದ ಶ್ರೀ ಚೌಡೇಶ್ವರಿ ಅಮ್ಮನ ದೇವಸ್ಥಾನದಲ್ಲಿ ಆಚರಿಸಲಾಗುವ ಹಬ್ಬ ವಿಶೇಷವಾಗಿರುತ್ತದೆ. ವಿಶೇಷ ಪೂಜೆ ಚರುಗ ಚೆಲ್ಲುವ ಕಾರ್ಯಕ್ರಮವೂ ಬಹಳ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಅಲ್ಲದೇ ಗಾಂಧಿನಗರ, ಮ್ಯಾಸಬೇಡರ ಕೇರಿ ಮತ್ತಿತರೆ ಕಡೆಗಳಲ್ಲಿ ಇರುವ ಅಮ್ಮನ ದೇವಸ್ಥಾನಗಳಲ್ಲಿಯೂ ಮೂಲ ದೇವಸ್ಥಾನದ ಪದ್ಧತಿ ಪ್ರಕಾರವೇ ಮಹಾಪೂಜೆ ಕಾರ್ಯಕ್ರಮಗಳು ಜರುಗುತ್ತವೆ.

19ರಂದು ಮಂಗಳವಾರ ದುಗ್ಗಮ್ಮನ ಎಡೆ ಜಾತ್ರೆ ಇರುತ್ತದೆ. ಭಕ್ತಾದಿಗಳು, ಜಾತಿ ಮತ ಭೇದವಿಲ್ಲದೇ, ಹೋಳಿಗೆ, ಅನ್ನ-ಮೊಸರು ಎಡೆ ಸಲ್ಲಿಸಿ, ಕಟ್ಟಿಕೊಂಡ ಹರಕೆಗಳನ್ನು ತೀರಿಸುತ್ತಾರೆ. ಎಡೆ ಸಲ್ಲಿಸುವ ಅಮ್ಮನ ಭಕ್ತರು ಅದರಲ್ಲೂ ಮಹಿಳೆಯರು ಸೋಮವಾರ ಮಧ್ಯರಾತ್ರಿಯಿಂದಲೇ ಸರತಿ ಸಾಲಿನಲ್ಲಿ ನಿಂತು ಎಡೆ, ಉಡಕ್ಕಿ, ಬಳೆ, ಕಣ, ಹೂವು, ಹರಿಶಿಣ-ಕುಂಕುಮ ಇತ್ಯಾದಿ ಅರ್ಪಿಸಿ, ಕಟ್ಟಿಕೊಂಡ ಹರಕೆ ಸಲ್ಲಿಸಿ ಧನ್ಯತಾ ಭಾವ ಹೊಂದುತ್ತಾರೆ. ದರ್ಶನ ಪಡೆಯುವ ಭಕ್ತರ ಸರತಿ ಸಾಲು ದೇವಸ್ಥಾನದ ಬಳಿಯಿಂದ ಕನ್ಯಕಾಪರಮೇಶ್ವರಿ ದೇವಿ ರಸ್ತೆಯನ್ನು ದಾಟಿ, ದೊಡ್ಡಪೇಟೆಯ ವಿರಕ್ತಮಠ, ಇತ್ತ, ಬಸವೇಶ್ವರ ದೇವಸ್ಥಾನವನ್ನೂ ದಾಟಿರುತ್ತದೆ.

ಅಂದೇ ಸಂಜೆ ಶ್ರೀ ಮಹಿಷಾಸುರ ಮರ್ದಿನಿ ಅವತಾರ ಅಲಂಕೃತ ಉತ್ಸವ ಮೂರ್ತಿಯ ಮೆರವಣಿಗೆ ಸಕಲ ವಾದ್ಯ ಮೇಳಗಳೊಂದಿಗೆ, ನಗರದ ಮುಖ್ಯರಸ್ತೆಗಳಲ್ಲಿಸಂಚರಿಸುತ್ತದೆ. ರಾತ್ರಿಯಾಗುತ್ತಲೇ ದೇವಸ್ಥಾನದ ಸುತ್ತ-ಮುತ್ತ ಕಾರ್ಯಕರ್ತರ ಕೇಕೆ, ಚೀರಾಟ ಮುಗಿಲು ಮುಟ್ಟಿ, ಅಮ್ಮನ ರೌದ್ರಾವತಾರ ಗೋಚರವಾದಂತೆ ಭಾಸವಾಗುತ್ತದೆ.!

ಗುಡಿಯ ಮುಂಭಾಗ ಕಾಯಿ ಒಡೆಯುವ ಯುವಕರ ಆರ್ಭಟ, ಕೂಗಾಟ, ಚೀರಾಟ ಮತ್ತು ಕೇಕೆ ಹಾಕುವ ಭಯಂಕರ ಶಬ್ದ ತಡರಾತ್ರಿಯವರೆಗೂ ಕಂಡುಬರುತ್ತದೆ. ಈ ಕೂಗಾಟ ಚೀರಾಟ ನಗರದ ಅನೇಕ ಕಡೆಗಳಲ್ಲಿ ಇರುವ ಅಮ್ಮನ ದೇವಸ್ಥಾನಗಳ ಬಳಿಯು ಇರುತ್ತದೆ. ಇದು ನಸುಕಿನವರೆಗೂ ನಡೆಯುತ್ತಲೇ ಇರುತ್ತದೆ. 'ಮಹಾಬಲಿ'ಯದೆ ಗುಸು-ಗುಸು. ಅಲ್ಲಂತೆ, ಇಲ್ಲಂತೆ..!?

ಬೆಳಿಗ್ಗೆ ಬೇಯಿಸುವ ಜೋಳದ ರಾಶಿಗೆ, ಕೋಣದ ರಕ್ತ ಮಿಶ್ರಣ ಮಾಡಲಾಗುತ್ತದೆ. ಅಲ್ಲದೆ ಭಕ್ತರು ತಂದಂತಹ ಎಡೆ, ಒಡೆದ ತೆಂಗಿನ ಕಾಯಿ ತುಂಡುಗಳನ್ನು ಚರುಗದ ರಾಶಿಯ ಮೇಲೆ ಹರಡಲಾಗುತ್ತದೆ. ಜಾತ್ರೆಯಲ್ಲಿ ಒಬ್ಬೊಬ್ಬರದು ಒಂದೊಂದು ಜವಾಬ್ದಾರಿ. ರೈತರು ಧಾನ್ಯ ನೀಡಿದರೆ, ಕುಂಬಾರರು ಮಡಿಕೆಗಳನ್ನು, ಮೇದಾರರು ಬುಟ್ಟಿಗಳನ್ನು ಹೊಸದಾಗಿ ತಯಾರಿಸಿ ನೀಡುತ್ತಾರೆ. ಅವರವರ ಪಾಲಿಗೆ ಬಂದ ಕೆಲಸಗಳನ್ನು ಚಾಚೂ ತಪ್ಪದಂತೆ ಮುಖ್ಯವಾಗಿ, ಲೋಪವಾಗದಂತೆ ಮಾಡುತ್ತಾರೆ.

20ರ ಬುಧವಾರ ಸೂರ್ಯೋದಯಕ್ಕೂ ಮುನ್ನವೇ ಮಹಾಪೂಜೆ ಆಗುತ್ತಲೇ ಚರುಗ ಚೆಲ್ಲುವ ಕಾರ್ಯ ಆರಂಭವಾಗುತ್ತದೆ. ತಲೆಗೆ ವಸ್ತ್ರ ಸುತ್ತಿಕೊಂಡ ಯುವಕರು ಹಣೆ ಮುಖಕ್ಕೆಲ್ಲ, ರಕ್ತದ ಕಲೆಯಂತೆ, ಕುಂಕುಮ ಹಚ್ಚಿಕೊಂಡು ತಲೆಯ ಮೇಲೆ ಬುಟ್ಟಿ ಹೊತ್ತುಕೊಂಡು, ಹುಲಿಗ್ಯೋ, ಹುಲಿಗ್ಯೋ ಎಂದು ಕೇಕೆ ಹಾಕುತ್ತಾ, ಊರ ಗಡಿವರೆಗೂ ಚರುಗ ಚೆಲ್ಲುತ್ತಾರೆ. ಹೀಗೆ ಚರುಗ ಚೆಲ್ಲುವುದರಿಂದ ಊರಲ್ಲಿ ಶಾಂತಿ ನೆಮ್ಮದಿ ಉಂಟಾಗುತ್ತದೆ. ದುಷ್ಟಶಕ್ತಿಗಳು ದೂರವಾಗುತ್ತವೆ ಎಂಬ ನಂಬಿಕೆ ಇದೆ.

ಕಡಿದ ಬಲಿ ಕೋಣನ ತಲೆಗೆ 'ಘಟ' ಎನ್ನುತ್ತಿದ್ದರು. ಅದನ್ನು ಗಾಂಧಿನಗರದಿಂದ ದುಗ್ಗಮ್ಮನ ದೇವಸ್ಥಾನದ ಪಾದಗಟ್ಟೆ ಬಳಿ ತಂದು ಪೂಜಿಸಿದ ನಂತರ, ಚರಗ ಆರಂಭಿಸಲಾಗುತ್ತಿತ್ತು. ಕೋಣನ ತಲೆಯನ್ನು ಬೇವಿನ ಸೊಪ್ಪಿನ ಜೊತೆ ಬುಟ್ಟಿಯಲ್ಲಿ ಹೊತ್ತುಕೊಂಡು, ಆಯುಧಗಳನ್ನು ಕೈಯಲ್ಲಿ ಹಿಡಿದುಕೊಂಡು ಮೆರವಣಿಗೆ ನಡೆಸಿ ಚರಗ ಚೆಲ್ಲಲಾಗುತ್ತಿತ್ತು. ಆದರೆ ಈಗ ಅದಕ್ಕೆ ಅವಕಾಶ ಇಲ್ಲದೆ ಇರುವ ಕಾರಣ ಬರೀ ಬುಟ್ಟಿಯಲ್ಲಿ ಕಾಳುಗಳನ್ನು ತುಂಬಿಕೊಂಡು ಊರ ಗಡಿತನಕ ಚರುಗ ಚೆಲ್ಲಲಾಗುತ್ತದೆ. ಇದುವೇ ಜಾತ್ರೆಯ ಬಹುದೊಡ್ಡ ವಿಶೇಷ.

ಹಗೇದಿಬ್ಬ ವೃತ್ತದ ಬಳಿಯಿರುವ ನಗರದೇವತೆ ದುರ್ಗಾಂಬಿಕಾ ದೇವಿ ಮಹಾದ್ವಾರದ ಕೆಳಗಿನಿಂದ ಚರುಗ ಸಾಗುತ್ತಲೇ ಇತ್ತ, ನಗರದ ಎಲ್ಲ ಕಡೆಯಿಂದಲೂ ಭಕ್ತರು ದೇವಸ್ಥಾನದ ಕಡೆಗೆ ಹೆಜ್ಜೆ ಹಾಕುತ್ತಾರೆ ಉಧೋ, ಉಧೋ, ದುಗ್ಗಮ್ಮ ನಿನ್ನಾಲ್ಕುದೋ ಉಧೋ.. ಎನ್ನುವ ಉದ್ಘಾರ ಮಾರ್ಧನಿಸುತ್ತದೆ. ಮಹಿಳೆಯರು, ಪುರುಷರು, ಅಬಾಲ ವೃದ್ಧರಾದಿಯಾಗಿ ಉರುಳು ಸೇವೆ, ದೀಡು ನಮಸ್ಕಾರ, ಬೇವಿನ ಉಡುಗೆ ಸೇವೆಯ ಹರಕೆ ಸಲ್ಲಿಸುತ್ತಾರೆ. ಗುಡಿಯತ್ತಾ ತೆರಳಿ ಪ್ರದಕ್ಷಿಣೆ ಹಾಕಿ, ಅಲ್ಲಿಯೇ ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ ಧನ್ಯತಾಭಾವ ಹೊಂದುತ್ತಾರೆ. ಊರಿನ ಎಲ್ಲ ರಸ್ತೆಗಳೂ ದುಗ್ಗಮ್ಮನ ದೇವಸ್ಥಾನದೆಡೆಗೆ ಸಾಗುತ್ತವೆ.

ಚರಗ ಪೂರ್ಣಗೊಳ್ಳುತ್ತಲೇ ಗುಡಿಯ ಬಾಗಿಲು ತೆರೆದು ಶುದ್ಧಗೊಳಿಸಿ, ವಿಶೇಷ ಪೂಜಾ ಕಾರ್ಯಗಳನ್ನು ಅರ್ಚಕರು ಆರಂಭಿಸುತ್ತಾರೆ. ಮುತ್ತೈದೆಯರು ಅಮ್ಮನಿಗೆ ಉಡಿ ತುಂಬುತ್ತಾರೆ. ನಂತರ ಭಕ್ತರಿಗೆ ದರ್ಶನ ಅವಕಾಶ ಕಲ್ಪಿಸಲಾಗುತ್ತದೆ. ಕುರಿ-ಕೋಳಿಗಳನ್ನು ಬಲಿಕೊಡುವ ಭಕ್ತರು ಅಮ್ಮನ ದರ್ಶನ ಪಡೆದು ಅಲ್ಲಿಂದ ಅರಿಶಿನ-ಕುಂಕುಮ ಮತ್ತು ತೀರ್ಥವನ್ನು ಮನೆಗೆ ತೆಗೆದುಕೊಂಡು ಹೋಗಿ ಕುರಿ-ಕೋಳಿಗಳ ಹಣೆಗೆ ಹಚ್ಚಿ, ಬಾಯಲ್ಲಿ ತೀರ್ಥ ಹಾಕಿ ನಂತರ ಬಲಿಕೊಟ್ಟು ಹರಕೆ ತೀರಿಸಿ ಕೃತಾರ್ಥರಾಗುತ್ತಾರೆ.

ಬುಧವಾರ ಮಧ್ಯಾಹ್ನದ ನಂತರ ನಗರದ ತುಂಬೆಲ್ಲಾ ಮಸಾಲೆಯದೇ ಘಮ ಘಮ. ಹರಿತವಾದ ಕತ್ತಿಯಿಂದ ಕುತ್ತಿಗೆ ಸೀಳಿಸಿಕೊಂಡು, ಕಣ್ಣು ಪಿಳಿಪಿಳಿ ಬಿಡುತ್ತಾ, ಬಾಲ ಅಲ್ಲಾಡಿಸುತ್ತಾ ಹಾಗೆಯೇ ಕಣ್ಣು ಮುಚ್ಚುವ ಕುರಿ-ಕೋಳಿಗಳ ಮಾರಣ ಹೋಮವೇ ನಡೆದುಹೋಗುತ್ತದೆ. ಮನೆಗೆ ಆಗಮಿಸುವ ನೆಂಟರು, ಬಂಧು-ಮಿತ್ರರಿಗೆ ರುಚಿಯಾದ ಬಾಡೂಟದ ವ್ಯವಸ್ಥೆ ಮಾಡಿ ಅವರನ್ನು ಖುಷಿಪಡಿಸುತ್ತಾರೆ.

ಮಾಂಸದ ಅಂಗಡಿಗಳು ಜನರಿಂದ ತುಂಬಿ ತುಳುಕುತ್ತಿರುತ್ತವೆ. ಅಂಗಡಿಗಳ ಮುಂದೆ ಕಡಿದ ಕುರಿಗಳ ತಲೆಗಳ ರಾಶಿ ನೋಡಲು ಭಯವೆನಿಸುತ್ತದೆ. ಕುರಿಗಳ ಕುತ್ತಿಗೆ ಸೀಳುವ, ಕುರಿ ತಲೆ ಸುಡುವ ಮತ್ತು ಕುರಿ ಚರ್ಮಕೊಳ್ಳುವ ವ್ಯಾಪಾರಸ್ಥರಿಗೆ ಬಿಡುವಿಲ್ಲದ ಕೆಲಸ.

ಜಾತ್ರೆಯೆಂದರೆ ಅದು ಬರೀ ಅಮ್ಮನ ಪೂಜೆ ಮಾತ್ರವಲ್ಲ ಅಲ್ಲಿ ಭಕ್ತರಿಗೆ ಬೇಕಾದಂತಹ ಎಲ್ಲವೂ ಲಭ್ಯ. ಮುಖ್ಯವಾಗಿ ಅರಿಶಿಣ-ಕುಂಕುಮ ಬಳೆ, ಮಕ್ಕಳಿಗೆ ಮುದ ನೀಡುವ ಆಟಿಕೆಗಳು, ತಿಂಡಿ ತಿನಿಸುಗಳು, ಮನರಂಜಿಸಲು ನಾಡಿನ ಹೆಸರಾಂತ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮಗಳು, ಕುಸ್ತಿ ಪ್ರಿಯರಿಗೆ ಮಲ್ಲಯುದ್ಧ, ಕುರಿ ಕಾಳಗ ಮತ್ತು ಊಟದ ವ್ಯವಸ್ಥೆಯನ್ನೂ ದೇವಸ್ಥಾನ ಸಮಿತಿ ಮಾಡಿರುತ್ತದೆ.

ಜಾತ್ರೆಗೆ ಬರುವ ಎಲ್ಲಾ ಭಕ್ತಾದಿಗಳಿಗೆ ತೊಂದರೆ ಆಗದಂತೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ದೇವಸ್ಥಾನ ಸಮಿತಿ ಅಧ್ಯಕ್ಷರೂ ಆದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಮತ್ತು ಜಿಲ್ಲಾ ಉಸ್ತುವಾರಿ ಸಚಿವರೂ ಮತ್ತು ದೇವಸ್ಥಾನ ಸಮಿತಿ ಕಾರ್ಯಾಧ್ಯಕ್ಷರೂ ಆದ ಶಾಮನೂರು ಮಲ್ಲಿಕಾರ್ಜುನ್ ಸೂಚನೆ ನೀಡಿದ್ದಾರೆ. ಜಿಲ್ಲಾಧಿಕಾರಿ ಮತ್ತು ಜಿಲ್ಲಾ ರಕ್ಷಣಾಧಿಕಾರಿಗಳೂ ಸಹ ಜಾತ್ರೆಯ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದು ಶಾಂತಿಯುತವಾಗಿ ಜಾತ್ರೆ ನಡೆಸಲು ಈಗಾಗಲೇ ಸಭೆ ನಡೆಸಿ ವಿನಂತಿಸಿದ್ದಾರೆ.

## ಗೋವುಗಳನ್ನು ಕಸಾಯಿ ಖಾನೆಗೆ ಕಳುಹಿಸಬೇಡಿ

ದಾವಣಗೆರೆ, ಮಾ. 17 - ದೇಶದಲ್ಲಿ ಗೋವುಗಳ ಸಂರಕ್ಷಣೆಯಾಗಬೇಕು. ಅವುಗಳು ಕಸಾಯಿಖಾನೆಗೆ ಹೋಗುವುದನ್ನು ನಿಲ್ಲಿಸಬೇಕು ಎಂದು ಉಡುಪಿ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು ನುಡಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಶನಿವಾರ, ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ 6ನೇ ದಿನ ಗುರು ರಾಯರ ವರ್ಧಂತಿ ಅಂಗವಾಗಿ ಮೃತ್ತಿಕಾ ವೃಂದಾವನಕ್ಕೆ ಸಹಸ್ರ ಕಳಶ ಕ್ಷೀರಾಭಿಷೇಕ ನೆರವೇರಿಸಿ ಅನುಗ್ರಹ ಸಂದೇಶ ನೀಡಿದರು.

ಹಸುಗಳು ಹಾಲು, ಮೊಸರು, ಬೆಣ್ಣೆ, ತುಪ್ಪ ಸೇರಿ ನಮಗೆ ಬೇಕಾದ ಪದಾರ್ಥಗಳನ್ನು ನೀಡುವ ಕಾಮಧೇನು. ನಾವು ಅವುಗಳಿಗೆ ಕಸ ನೀಡಿದರೆ ಪ್ರತಿಯಾಗಿ ರಸ ಕೊಡುತ್ತವೆ. ನಮಗೆ ಉಪಕಾರ ಮಾಡುವ ಈ ಪ್ರಾಣಿಗಳು ಸ್ವಚ್ಛಂದವಾಗಿ ವಿಹರಿಸುವಂತಾಗಬೇಕು. ಅವುಗಳನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಜಗತ್ತಿನಲ್ಲಿ ಎಲ್ಲ ಬಗೆಯ ಕಾರ್ಖಾನೆಗಳಿವೆ, ಆದರೆ ಹಾಲು ಉತ್ಪಾದಿಸುವ ಕೈಗಾರಿಕೆ ಎಲ್ಲಿಯೂ ಇಲ್ಲ. ಗೋಪಾಲ ಕೃಷ್ಣನ (ಗೋವುಗಳ) ಫ್ಯಾಕ್ಟರಿಯಲ್ಲಿ ಮಾತ್ರ ಕ್ಷೀರ ತಯಾರಾಗುತ್ತದೆ ಎಂದು ತಿಳಿಸಿದರು.



ಗುರುಗಳಿಗೆ ಹಾಲಿನ ಅಭಿಷೇಕ ಮಾಡಿದರೆ ಅವರು ನಮಗೆ ಪಂಚಾಮೃತ ನೀಡುತ್ತಾರೆ. ಬ್ಯಾಂಕಿನಲ್ಲಿಟ್ಟಿದ್ದು ಡೆಡ್ ಇನ್‌ವೆಸ್ಟ್‌ಮೆಂಟ್ ಆಗಬಹುದು, ಆದರೆ ಗುರುಗಳಿಗೆ ನೀಡಿದರೆ ಅದರ ನೂರು ಪಟ್ಟು ನಮಗೆ ಅನುಗ್ರಹ ಮಾಡುತ್ತಾರೆ ಎಂದರು.

ಭಾರತ ಹಿಂದೂ ರಾಷ್ಟ್ರವಾಗಬೇಕು, ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬರಬೇಕು. ರಾಮ ಮಂದಿರ ಪೂರ್ಣವಾಗಬೇಕು, ರಾಮರಾಜ್ಯವಾಗಬೇಕು. ಕಾಶಿ ಕ್ಷೇತ್ರದಲ್ಲಿ ಕಾರಿಡಾರ್ ಅಭಿವೃದ್ಧಿಯಾಗಿದೆ. ಜಗತ್ತಿನ ಆರ್ಥಿಕತೆಯಲ್ಲಿ ಭಾರತ 5ನೇ ಸ್ಥಾನಕ್ಕೇರಿದ್ದು, ಮುಂಬರುವ ದಿನಗಳಲ್ಲಿ ಅದು 1ನೇ ಸ್ಥಾನಕ್ಕೇರಲಿ, ರಾಯರು ಹಾಗೆ ಮಾಡಿಸಲಿ ಎಂದು ಆಶಿಸಿದರು.

ಇತ್ತೀಚಿನ ದಿನಗಳಲ್ಲಿ ಮಹಿಳೆಯರು ನಮ್ಮ ಸಂಸ್ಕೃತಿಯಿಂದ ದೂರ ಉಳಿಯುತ್ತಿದ್ದಾರೆ. ಅವರಿಗೆ ಜಾಗೃತಿ ಮೂಡಿಸಬೇಕು. ಕುಂಕುಮ, ಬಳೆ, ಕಾಲುಂಗುರ, ಮೂಗುತಿ ಧರಿಸಿ ನಮ್ಮ ಸಂಸ್ಕೃತಿಯನ್ನು ಪಾಲಿಸಬೇಕು ಎಂದು ತಿಳಿಸಿದರು.

ಅದಮಾರು ಮಠದ ಶ್ರೀ ಈಶಪ್ರಿಯತೀರ್ಥ ಶ್ರೀಪಾದಂಗಳವರು ಅನುಗ್ರಹ ಸಂದೇಶ ನೀಡಿ ಭಗವಂತ ಎಲ್ಲೆಡೆ ಇದ್ದಾನೆ, ಯೋಗಿಗಳಿಗೆ ಮಾತ್ರ ಆತ ಸಿಗುತ್ತಾನೆ. ಅಂಥವರ ಸಂಗವನ್ನು ಮಾಡುವುದರಿಂದ ನಾವೂ ದೇವರ ಬಗ್ಗೆ ಸ್ವಲ್ಪ ತಿಳಿಯಬಹುದು ಎಂದು ಹೇಳಿದರು.

ಎಲ್ಲವನ್ನೂ ಭಗವಂತನಿಗೆ ಸಮರ್ಪಿಸಬೇಕು. ಧರ್ಮ ಜಾಗೃತಿಯಾಗಬೇಕು. ಎಲ್ಲರೂ ಸೇರಿ ಭಾರತವನ್ನು ಕಟ್ಟೋಣ ಎಂದು ಸಂದೇಶ ನೀಡಿದರು.

ಮಂತ್ರಾಲಯದ ಶ್ರೀ ರಾಘವೇಂದ್ರ ಸಪ್ತಾಹ ಕಾರ್ಯಾಚರಣೆ ಸಮಿತಿಯ ಅಧ್ಯಕ್ಷ, ಅರ್ಚಕ ಪರಿಮಳಾಚಾರ್ಯ, ವ್ಯಾಸರಾಜಾಚಾರ್ಯ, ರಮಾಕಾಂತಾಚಾರ್ಯ, ವಿದ್ವಾನ್ ಕೆ. ಅಪ್ಪಣ್ಣಾಚಾರ್ಯ, ಡಾ. ಜೆ. ಸದಾನಂದ ಶಾಸ್ತ್ರಿ, ಮಹೋತ್ಸವ ಸಮಿತಿಯ ಕಾರ್ಯದರ್ಶಿ ಕಂಪ್ಲಿ ಗುರುರಾಜಾಚಾರ್ ಭಾಗವಹಿಸಿದ್ದರು.

## ಪೆಟ್ರೋಲ್ - ಡೀಸೆಲ್ ಬೆಲೆ ಆಂಧ್ರಪ್ರದೇಶದಲ್ಲಿ ಅತಿ ಹೆಚ್ಚು

ನವದೆಹಲಿ, ಮಾ. 17 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಕೇರಳಗಳಲ್ಲಿ ದೇಶದಲ್ಲೇ ಅತಿ ಹೆಚ್ಚಾಗಿದೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ದೆಹಲಿ ಹಾಗೂ ಈಶಾನ್ಯದ ರಾಜ್ಯಗಳಲ್ಲಿ ತೈಲ ಬೆಲೆ ಕಡಿಮೆ ಇದೆ. ಸ್ಥಳೀಯ ತೆರಿಗೆಗಳ ಕಾರಣದಿಂದಾಗಿ ಬೆಲೆಯಲ್ಲಿ ವ್ಯತ್ಯಾಸವಿದೆ.

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಕಳೆದ ವಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 2 ರೂ. ಇಳಿಸಿದ್ದವು. ಎರಡು ವರ್ಷಗಳ ನಂತರ ತೈಲ ಬೆಲೆಯಲ್ಲಿ ಪರಿಷ್ಕರಣೆ ಮಾಡಲಾಗಿತ್ತು.

### ಅಂಡಮಾನ್‌ನಲ್ಲಿ ತೈಲ ಬೆಲೆ ಅತಿ ಕಡಿಮೆ

ಜಗನ್ ಮೋಹನ್ ರೆಡ್ಡಿ ಅವರ ವೈ.ಎಸ್.ಆರ್. ಸಿ.ಪಿ. ಆಡಳಿತ ಇರುವ ಆಂಧ್ರ ಪ್ರದೇಶದಲ್ಲಿ ಪೆಟ್ರೋಲ್ ಬೆಲೆ ದೇಶದಲ್ಲೇ ಅತಿ ಹೆಚ್ಚಿನ ಲೀಟರ್‌ಗೆ 109.87 ರೂ. ಆಗಿದೆ. ಎಡಪಕ್ಷಗಳ ಆಡಳಿತ ಇರುವ ಕೇರಳದಲ್ಲಿ ಪೆಟ್ರೋಲ್ ಬೆಲೆ 107.54 ರೂ. ಆಗಿದೆ. ಕಾಂಗ್ರೆಸ್ ಆಡಳಿತದ ತೆಲಂಗಾಣದಲ್ಲಿ ಪೆಟ್ರೋಲ್ ಬೆಲೆ 107.39 ರೂ. ಆಗಿದೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಪೆಟ್ರೋಲ್ ಬೆಲೆ ಅತಿ ಕಡಿಮೆ ಲೀಟರ್‌ಗೆ 82 ರೂ. ಆಗಿದೆ. ಸಿಲ್ವಾಸಾ ಹಾಗೂ ಡಮನ್‌ನಲ್ಲಿ ಲೀಟರ್‌ಗೆ 92.38 ರೂ. ಆಗಿದೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆ 94.76 ರೂ. ಆಗಿದೆ.

ಡೀಸೆಲ್ ಬೆಲೆಯ ವಿಷಯದಲ್ಲೂ ಪರಿಸ್ಥಿತಿ ಇದೇ ರೀತಿ ಇದೆ. ಆಂಧ್ರ ಪ್ರದೇಶದ ಅಮರಾವತಿಯಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ 97.6 ರೂ. ಆಗಿದೆ. ಕೇರಳದ ರಾಜಧಾನಿ ತಿರುವನಂತಪುರಂನಲ್ಲಿ ಲೀಟರ್ ಡೀಸೆಲ್ ಬೆಲೆ 96.41 ರೂ. ಹಾಗೂ ಹೈದರಾಬಾದ್‌ನಲ್ಲಿ 95.63 ರೂ. ಆಗಿದೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ 78 ರೂ. ಆಗಿದೆ. ದೆಹಲಿಯಲ್ಲಿ 87.66 ರೂ. ಹಾಗೂ ಗೋವಾದಲ್ಲಿ 87.76 ರೂ. ಆಗಿದೆ.

## 2018-19ರ ಚುನಾವಣಾ ಬಾಂಡ್ ವಿವರ ಬಹಿರಂಗಕ್ಕೆ ಅರ್ಜಿ

ನವದೆಹಲಿ, ಮಾ. 17 - ಮಾರ್ಚ್ 1, 2018ರಿಂದ ಏಪ್ರಿಲ್ 11, 2019ರ ನಡುವೆ ಮಾರಲಾದ ಚುನಾವಣಾ ಬಾಂಡ್‌ಗಳ ಕುರಿತ ಮಾಹಿತಿ ಬಹಿರಂಗ ಪಡಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಚುನಾವಣಾ ಬಾಂಡ್‌ಗಳನ್ನು 2018ರಲ್ಲಿ ಜಾರಿಗೆ ತರಲಾಗಿತ್ತು. ಕಳೆದ ತಿಂಗಳು ಐತಿಹಾಸಿಕ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಏಪ್ರಿಲ್ 12, 2019ರಿಂದ ಫೆಬ್ರವರಿ 15, 2024ರ ನಡುವೆ ಖರೀದಿಸಲಾದ ಬಾಂಡ್‌ಗಳ ವಿವರ ಬಹಿರಂಗ ಪಡಿಸುವಂತೆ ಆದೇಶಿಸಿತ್ತು. ಸಿಟಿಜನ್ಸ್ ರೈಟ್ಸ್ ಟ್ರಸ್ಟ್ ಮತ್ತೊಂದು ಅರ್ಜಿಯನ್ನು ದಾಖಲಿಸಿದ್ದು, ಮಾರ್ಚ್ 2018ರಿಂದ ಏಪ್ರಿಲ್ 2019ರ ನಡುವೆ 4,002 ಕೋಟಿ ರೂ.ಗಳ ಬಾಂಡ್‌ಗಳನ್ನು ಖರೀದಿಸಲಾಗಿದೆ. ಈ ಮಾಹಿತಿಯನ್ನೂ ಬಹಿರಂಗ ಪಡಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಅಲ್ಫಾನ್ಯೂಮರಿಕ್ ಸಂಖ್ಯೆ, ಖರೀದಿ ದಿನಾಂಕ, ಮೊತ್ತ, ದೇಣಿಗೆ ನೀಡಿದವರು ಹಾಗೂ ದೇಣಿಗೆ ಪಡೆದ ಪಕ್ಷಗಳ ಮಾಹಿತಿ ಬಹಿರಂಗ ಪಡಿಸಬೇಕು ಎಂದು ಅರ್ಜಿದಾರರು ವಾದ ಮಂಡಿಸಿದ್ದಾರೆ.

ಚುನಾವಣಾ ಬಾಂಡ್ ಯೋಜನೆ ಸಂವಿಧಾನ ಬಾಹಿರ ಎಂದು ಘೋಷಿಸಲಾಗಿದೆ. ಹೀಗಾಗಿ ದೇಣಿಗೆ ನೀಡಿದವರು ಹಾಗೂ ಪಡೆದವರ ಸಂಪೂರ್ಣ ವಿವರವನ್ನು ಮಾರ್ಚ್ 2018ರಿಂದಲೇ ಪಡೆಯಲು ಮತದಾರರಿಗೆ ಹಕ್ಕಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

## ಉತ್ತರಾಖಂಡ : ಕಾಂಗ್ರೆಸ್ ಶಾಸಕ ಭಂಡಾರಿ ಬಿಜೆಪಿಗೆ ಸೇರ್ಪಡೆ

ನವದೆಹಲಿ, ಮಾ. 17 - ಉತ್ತರಾಖಂಡ ಕಾಂಗ್ರೆಸ್ ಶಾಸಕ ರಾಜೇಂದ್ರ ಸಿಂಗ್ ಭಂಡಾರಿ ಅವರು ಭಾನುವಾರ ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

ಲೋಕಸಭಾ ಚುನಾವಣೆಗೆ ಮುಂಚೆ ಇದು ಕಾಂಗ್ರೆಸ್‌ಗೆ ಹಿನ್ನಡೆಯಾಗಿದೆ.

ಮೂರು ಬಾರಿ ಶಾಸಕರಾಗಿದ್ದ ಭಂಡಾರಿ ಅವರು, ಈ ಹಿಂದೆ ರಾಜ್ಯದಲ್ಲಿ ಸಚಿವರೂ ಆಗಿದ್ದರು. ಅವರು ಉತ್ತರಾಖಂಡದ ಬದರೀನಾಥ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. ಶಾಸಕ ಸ್ಥಾನಕ್ಕೆ ಅವರು ರಾಜೀನಾಮೆ ನೀಡಿದ್ದಾರೆ.

## ಲೋಕ ಅದಾಲತ್‌ನಲ್ಲಿ ಮತ್ತೆ ಒಂದಾದ ಜೋಡಿಗಳು

ದಾವಣಗೆರೆ, ಮಾ.17 - ರಾಷ್ಟ್ರೀಯ ಲೋಕ ಅದಾಲತ್ ಮೂಲಕ ರಾಜೀ ಸಂಧಾನದಡಿ ಜಿಲ್ಲೆಯಲ್ಲಿ 4,000 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ನಗರದ ಕೌಟುಂಬಿಕ ನ್ಯಾಯಾಲಯದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ದಾಂಪತ್ಯ ಜೀವನದಲ್ಲಿ ಬಿರುಕು ಕಂಡು ವಿಚ್ಛೇದನ ಪಡೆಯುವ ಹಂತಕ್ಕೆ ತಲುಪಿ ನ್ಯಾಯಾಲಯದ ಮೆಟ್ಟಿಲು ಏರಿದ್ದ ದಂಪತಿಗಳಲ್ಲಿ 7 ದಂಪತಿಗಳು ಕಳೆದ 4 ವರ್ಷದಿಂದ ನ್ಯಾಯಾಲಯಕ್ಕೆ ವಿಚ್ಛೇದನಕ್ಕಾಗಿ ಅಲೆದಾಡುತ್ತಿದ್ದರು. ಇವರಲ್ಲಿ ಪರಶುರಾಮ ಕೋಂ ಇಂದಿರಾ, ಇವರು ಮಾರ್ಚ್ 16 ರಂದು ನಡೆದ ಲೋಕ ಅದಾಲತ್‌ನಲ್ಲಿ ಒಂದಾಗಿದ್ದಾರೆ.

ವೀರೇಶ್ ಕೋಂ ಪೂಜಾ, ಇವರು 2 ವರ್ಷದಿಂದ ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದು, ಈಗ ಲೋಕ ಅದಾಲತ್‌ನಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಪ್ರೀತಂ ಕೋಂ ಚಂದನ್, ಮಂಜುನಾಥ ಕೋಂ ಕಲ್ಪನ, ಸಂದೀಪ ಕೋಂ ವಿಶಾಲ ಲೋಕ ಅದಾಲತ್‌ನಲ್ಲಿ ಒಂದಾಗಿದ್ದಾರೆ.



ಲೋಕ ಅದಾಲತ್‌ನಲ್ಲಿ ಇನ್ನೂ 1000 ಪ್ರಕರಣಗಳು ರಾಜೀಯಾಗಬಹುದು. ಲೋಕ ಅದಾಲತ್ ಪರ್ಯಾಯ ವಿವಾದ ಪರಿಹಾರ ಕಾರ್ಯವಿಧಾನಗಳಲ್ಲಿ ಒಂದು. ವ್ಯಾಜ್ಯ ಪೂರ್ವ ಹಂತದಲ್ಲಿ ಬಾಕಿ ಇರುವ ವಿವಾದಗಳು, ಪ್ರಕರಣಗಳನ್ನು ಇತ್ಯರ್ಥಪಡಿಸುವ ವೇದಿಕೆಯಾಗಿದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ, ಜಿಲ್ಲಾ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ದಶರಥ ಬಿ, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರವೀಣ್ ಕುಮಾರ್, ಪೋಕ್ಸೋ ನ್ಯಾಯಾಧೀಶರಾದ ಶ್ರೀಪಾದ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಲ್.ಹೆಚ್. ಅರುಣಕುಮಾರ್ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

### ರಾಷ್ಟ್ರೀಯ ಲೋಕ ಅದಾಲತ್: 1568 ಜಾರಿ ಪ್ರಕರಣಗಳು ಇತ್ಯರ್ಥ

ದಾವಣಗೆರೆ ಮಾ.17 - ಶನಿವಾರ ದಾವಣಗೆರೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ್ ಆದಾಲತ್ತನ್ನು ಹಮ್ಮಿಕೊಳ್ಳಲಾಗಿತ್ತು.

ರಾಜೀ, ಸಂಧಾನದ ಮೂಲಕ ಜಿಲ್ಲೆಯಲ್ಲಿ 4568 ಜಾರಿಯಲ್ಲಿರುವ ಪ್ರಕರಣಗಳಲ್ಲಿ ರೂ. 12,56,89,479 ಹಣದ ಪರಿಹಾರ ಒದಗಿಸಲಾಗಿದೆ. ಮತ್ತು 1,44,773 ವ್ಯಾಜ್ಯಪೂರ್ವ ಪ್ರಕರಣಗಳಲ್ಲಿ 47,33,07,260 ರೂ. ಹಣದ ಪರಿಹಾರವಾಗಿ ರಾಜೀ ಮೂಲಕ ಕೊಡಿಸಿ ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದೆ.

**ವಿವಿಧ ಪ್ರಕರಣಗಳ ವಿವರ:** 81 ಅಪರಾಧಿಕ ಪ್ರಕರಣಗಳು, 143 ಚೆಕ್ ಅಮಾನ್ಯ ಪ್ರಕರಣಗಳು, 19 ಬ್ಯಾಂಕ್ ವಸೂಲಾತಿ ಪ್ರಕರಣಗಳು, 14 ಇತರೆ ಹಣ ವಸೂಲಾತಿ ಪ್ರಕರಣಗಳು, 53 ಅಪಘಾತ ಪ್ರಕರಣಗಳು, 19 ಪಾಲು ವಿಭಾಗ ಪ್ರಕರಣಗಳು, 200 ಜಾರಿ ಅರ್ಜಿಗಳು ಅಲ್ಲದೆ ಹಲವು ಕಾರಣಕ್ಕಾಗಿ ದಾಖಲಿಸಿದ 55 ದಾವೆಗಳು ಮತ್ತು ಜೀವನಾಂಶ ಕೋರಿ ದಾಖಲಿಸಿದ್ದ ದಾವೆಗಳು ರಾಜೀ ಮೂಲಕ ಇತ್ಯರ್ಥಗೊಂಡಿರುತ್ತವೆ. ಇದಲ್ಲದೇ ಇತರೆ ಪ್ರಕರಣಗಳು ಸೇರಿ ಒಟ್ಟು 1568 ಜಾರಿಯಲ್ಲಿದ್ದ ಪ್ರಕರಣಗಳು ಇತ್ಯರ್ಥಗೊಂಡಿದೆ.

ಪ್ರಮುಖವಾಗಿ ಕೌಟುಂಬಿಕ ಕಲಹದಿಂದಾಗಿ ಬೇರೆಯಾಗಿದ್ದ 8 ಜೋಡಿ ದಂಪತಿಗಳು ಒಂದಾಗಿದ್ದು ವಿಶೇಷವಾಗಿತ್ತು. ಜಿಲ್ಲೆಯಾದ್ಯಂತ ಸುಮಾರು 513 ಕ್ಕಿಂತ ಹೆಚ್ಚು ಶಾಲಾ ವಿದ್ಯಾರ್ಥಿಗಳ ಜನನ ಪ್ರಮಾಣ ಪತ್ರಗಳ ಕುರಿತು ಕಂದಾಯ ಇಲಾಖೆ ಮತ್ತು ಮಹಾನಗರ ಪಾಲಿಕೆಯ ಅಧಿಕಾರಿಗಳು ರಾಜೀ ಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಮತ್ತು ಅವರುಗಳಿಗೆ ಸರ್ಕಾರದಿಂದ ಬರಬಹುದಾದ ವಿದ್ಯಾರ್ಥಿ ವೇತನ ಹಾಗೂ ಇತರ ಅನುಕೂಲತೆಗಳಿಗೆ ಅನುವು ಮಾಡಿಕೊಟ್ಟಂತಾಯಿತು.

# ಇಲ್ಲಿ ಸರಗ ಹರಿಯುವುದಿಲ್ಲ: ಕೋಣದ ಬಲಿ ಇಲ್ಲ, ಅತ್ತಿಗೆರೆಯಲ್ಲಿ ಸಾತ್ವಿಕತೆ ಮೆರೆವ ದುರುಗಮ್ಮನ ಜಾತ್ರೆ

**ಜಿ.ಜಗದೀಶ್, ಮಾಯಕೊಂಡ**

ಮಾರಮ್ಮ, ದುರುಗಮ್ಮನ ಜಾತ್ರೆಗಳೆಂದರೆ, ಕುರಿ, ಕೋಳಿ, ಕೋಣ ಬಲಿಯದೇ ಕಾರುಬಾರು. ಊರ ಗಡಿ ಸುತ್ತಲೂ ಸರಗ ಚೆಲ್ಲಿ ಭಕ್ತಿ ಪ್ರದರ್ಶಿಸುವುದು ಸಾಮಾನ್ಯ. ಇದಕ್ಕೆ ಅಪವಾದ ಎಂಬಂತೆ ತಾಲ್ಲೂಕಿನ ಅತ್ತಿಗೆರೆಯಲ್ಲಿ ಸಾರ್ವಜನಿಕ ಪ್ರಾಣಿ ಬಲಿ ನಡೆಸದೇ, ಮಾಂಸಹಾರದ ಎಡೆ ಹಾಕದೇ ಸಾತ್ವಿಕವಾಗಿ ಹಬ್ಬ ನಡೆಸುವುದು ವಿಶೇಷ.

ಗ್ರಾಮ ದೇವತೆ ಜಾತ್ರೆಗಳಲ್ಲಿ ಬಹುತೇಕ ಒಂದೇ ರೀತಿಯ ಸಂಪ್ರದಾಯಗಳ ಆಚರಣೆ ಇರುತ್ತದೆ.

ಸೋಮವಾರ ಮದುವಣಗಿತ್ತಿ ಶಾಸ್ತ್ರ, ಕಂಕಣಧಾರಣೆ ಮಾಡುವುದು, ಮಂಗಳವಾರ ದೇವಿಯ ಮೆರವಣಿಗೆ ನಡೆಸಲಾಗುತ್ತದೆ. ಬುಧವಾರ ಬೆಳಗಿನ ಜಾವ ಕೋಣದ ರಕ್ತ, ಕರುಸವನ್ನು ಜೋಳದ ಅನ್ನ ತುಂಬಿದ ಸರಗದ ಬುಟ್ಟಿಯಲ್ಲಿ ಬೆರೆಸಿ, ಊರ ಸುತ್ತಲೂ ಉಗ್ಗುತ್ತಾರೆ. ಸರಗ ಹರಿಯುವುದರಿಂದ ಗ್ರಾಮದಲ್ಲಿ ಸುಖ - ಶಾಂತಿ - ಸಮೃದ್ಧಿ ಹೆಚ್ಚುತ್ತದೆ ಎಂಬುದು ಪ್ರತೀತಿ.

ಜಾತ್ರೆಯಲ್ಲಿ ಇಂತಹ ಸಮುದಾಯದವರು ಇಂತದ್ದೇ ಕಾಯಕದಲ್ಲಿ ಪಾಲ್ಗೊಳ್ಳಬೇಕೆಂಬ ಅನೌಪಚಾರಿಕ ನಡೆಗಳೂ ಅನಾದಿ ಕಾಲದಿಂದ ಬೆಳೆದು ಬಂದಿದೆ.

ಅತ್ತಿಗೆರೆಯಲ್ಲಿ ಗ್ರಾಮಸ್ಥರು ಇದ್ಯಾವುದಕ್ಕೂ ಅವಕಾಶ ನೀಡದೇ ಸಾರ್ವಜನಿಕ ಪ್ರಾಣಿಬಲಿ, ಸರಗ ಹಾಕುವುದನ್ನು ಕೈಬಿಟ್ಟು, ದುರುಗಮ್ಮನಿಗೆ ಅನ್ನ, ಮೊಸರು, ಬಾಳೆಹಣ್ಣಿನ ಎಡೆಯನ್ನಷ್ಟೇ ಹಾಕಿ ಭಕ್ತಿ ಮೆರೆಯುತ್ತಾರೆ. ವಿಜೃಂಭಣೆಯಿಂದ ಸಾತ್ವಿಕ ರೀತಿಯಲ್ಲಿ ದುರುಗಮ್ಮದೇವಿ ಜಾತ್ರೆ ನೆರವೇರಿಸುತ್ತಾರೆ.



## ಧಾರ್ಮಿಕ ಕಾರ್ಯಕ್ರಮಗಳ ವಿವರ

**ಅತ್ತಿಗೆರೆಯಲ್ಲಿ ಭಾನುವಾರ ಗೌಡರ ಮನೆಯಿಂದ ದೇವಿಗೆ ಮದುವಣಗಿತ್ತಿ ಶಾಸ್ತ್ರ, ಕಂಕಣ ಧಾರಣೆ ಮಾಡಿ ಹಬ್ಬಕ್ಕೆ ಚಾಲನೆ ನೀಡಲಾಗಿದೆ. ಸೋಮವಾರ ಗ್ರಾಮಸ್ಥರಿಂದ ಕುಂಕುಮ ಮತ್ತು ಕಂಕಣಧಾರಣೆ ನಡೆಯಲಿದೆ. ಮಂಗಳವಾರ ಮೆರವಣಿಗೆ, ಬುಧವಾರ ದೊಡ್ಡ ಎಡೆ ಕಾರ್ಯಕ್ರಮ, ಗುರುವಾರ ಬೇವು ಬೇಟೆ, ಶುಕ್ರವಾರ ಓಕುಳಿ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.**

**ಕೋಣ ಬಲಿ ಕೊಡಲ್ಲ, ಸರಗ ಹಾಕಲ್ಲ :** 'ನಮ್ಮೂರಿನಲ್ಲಿ ಊರೊಳಗೆ ಮತ್ತು ಊರ ಸುತ್ತಮುತ್ತಲೂ ಹಲವಾರು ಕರವುಗಲ್ಲುಗಳಿವೆ. ಅವುಗಳು ಲಿಂಗದ ಆಕಾರದಲ್ಲಿವೆ. ಲಿಂಗ ಮುದ್ರೆಯ ಕುರುಹುಗಳಿರುವ ಕಡೆ ಮಾಂಸಾಹಾರ, ಪ್ರಾಣಿಗಳ ಬಲಿ ನೀಡುವುದು ನಿಷಿದ್ಧ, ಎಂದು ನಮ್ಮ ಹಿರಿಯರು ನಂಬಿದ್ದಾರೆ, ಸರಗ ಚೆಲ್ಲಿದರೆ ಲಿಂಗ ಮುದ್ರೆಯ ಕಲ್ಲುಗಳಿಗೆ ಅಪಚಾರ ಎಂದು ಭಾವಿಸಿ, ನಮ್ಮೂರ ಜಾತ್ರೆಯಲ್ಲಿ ಸರಗ ಚೆಲ್ಲುವುದನ್ನು ನಿಷೇಧಿಸಲಾಗಿದೆ. ಮನೆಗಳಲ್ಲಿ ಮಾಂಸಾಹಾರ ಉಣಬಡಿಸಲು ಅವಕಾಶವಿದೆ. ದೇವಿಗೆ ಮಾತ್ರ ಸಿಹಿ ಅಡುಗೆ ಎಡೆ ಮಾಡುತ್ತೇವೆ ಎನ್ನುತ್ತಾರೆ, ಗ್ರಾ.ಪಂ. ಸದಸ್ಯ ಮಂಜುನಾಥ ಬಾಬು, ಮುಖಂಡರಾದ ಎ.ಕೆ.ಅಂಜಿನಪ್ಪ, ಎ.ಒ.ರವಿ, ದೇವರಾಜ್, ವೆಂಕಟೇಶ್, ಶಿವಣ್ಣ, ಮನೋಜ್, ಸಿದ್ದೇಶ್ ಮತ್ತು ನಾಗರಾಜ್.

**ಕಳೆಗಟ್ಟಿದ ಸಂಭ್ರಮ :** ಊರಿನಲ್ಲಿ ಜಾತ್ರೆ ಸಂಭ್ರಮ ಕಳೆಗಟ್ಟಿದೆ. ದೇವಾಲಯಗಳಿಗೆ ಸುಣ್ಣ - ಬಣ್ಣ ಮಾಡಿಸಲಾಗಿದೆ. ಬೀದಿಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಸ್ವಾಗತ ಕೋರುವ ಫ್ಲೆಕ್ಸ್, ಬ್ಯಾನರ್ ಹಾಕಲಾಗಿದೆ.

'ಗ್ರಾಮ ಪಂಚಾಯತಿಯಿಂದ ಜಾತ್ರೆ ಪ್ರಯುಕ್ತ ಗ್ರಾಮದಲ್ಲಿ ಸ್ವಚ್ಛತೆ, ಬೀದಿ ದೀಪ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಗ್ರಾಮದ ಎಲ್ಲರ ಸಹಕಾರದಿಂದ ಜಾತ್ರೋತ್ಸವ ಯಶಸ್ವಿಗೊಳಿಸಲಾಗುತ್ತಿದೆ ಎನ್ನುತ್ತಾರೆ ಗ್ರಾ. ಪಂ. ಅಧ್ಯಕ್ಷ ಕೆ.ಎಂ.ಮಹೇಶ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿವೇಕಾನಂದ.

# ಉಕ್ಕಡಗಾತ್ರಿಯಲ್ಲಿ ವೈಭವದ ಬೆಳ್ಳಿ ರಥೋತ್ಸವ, ಪಾಲಿಕೋತ್ಸವ





ಮಲೇಬೆನ್ನೂರು, ಮಾ.17- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ನಡೆಯುತ್ತಿರುವ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಜಾತ್ರೆ ಅಂಗವಾಗಿ ಶನಿವಾರ ಬೆಳಗ್ಗೆ ಅಜ್ಜಯ್ಯನ ಬೆಳ್ಳಿ ರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ವೈಭವದಿಂದ ಜರುಗಿತು.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಬೆಳ್ಳಿ ರಥಕ್ಕೆ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು. ನಂತರ ಭಕ್ತರು, ಅಜ್ಜಯ್ಯ ಅಜ್ಜಯ್ಯ ಎಂಬ ಜಯಘೋಷಗಳೊಂದಿಗೆ ಬೆಳ್ಳಿ ರಥವನ್ನು ಎಳೆದು ಸಂಭ್ರಮಿಸಿದರು. ಸಂಜೆ ಅಜ್ಜಯ್ಯನ ಪಾಲಿಕೋತ್ಸವವು ಕೂಡಾ ಸಂಭ್ರಮದಿಂದ ನಡೆಯಿತು.

ಅಲಂಕೃತ ಟ್ರ್ಯಾಕ್ಟರ್‌ನಲ್ಲಿ ಅಜ್ಜಯ್ಯನ ಮೂರ್ತಿ ಪ್ರತಿಷ್ಠಾಪಿಸಿ, ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಪಟಾಕಿ ಸಿಡಿತ ಬಾನಂಗಳದಲ್ಲಿ ಬಣ್ಣ ಬಣ್ಣದ ಚಿತ್ತಾರ ಮೂಡಿಸಿ ಎಲ್ಲರ ಗಮನ ಸೆಳೆದವು. ಗದ್ದುಗೆ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ವಾಸನದ ಜಿ.ನಂದಿಗೌಡ್ರು, ಕಾರ್ಯದರ್ಶಿ ಸುರೇಶ್ ಮತ್ತು ನಿರ್ದೇಶಕರುಗಳು ಹಾಜರಿದ್ದು, ಈ ಎಲ್ಲಾ ಕಾರ್ಯಕ್ರಮಗಳ್ನು ನಡೆಸಿಕೊಟ್ಟರು.

# ಚುನಾವಣಾ ಬಾಂಡ್ ಒಂದು ಪ್ರಯೋಗ : ಆರ್.ಎಸ್.ಎಸ್. ಪ್ರಧಾನ ಕಾರ್ಯದರ್ಶಿ

ನಾಗಪುರ, ಮಾ. 17 - ಚುನಾವಣಾ ಬಾಂಡ್ ಒಂದು ಪ್ರಯೋಗ ಎಂದು ಹೇಳಿರುವ ಆರ್.ಎಸ್.ಎಸ್. ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ, ಈ ಪ್ರಯೋಗ ಎಷ್ಟರ ಮಟ್ಟಿಗೆ ಪರಿಣಾಮಕಾರಿ ಹಾಗೂ ಲಾಭದಾಯಕ ಎಂಬುದನ್ನು ಭವಿಷ್ಯವೇ ಹೇಳಲಿದೆ ಎಂದಿದ್ದಾರೆ.

ಆರ್.ಎಸ್.ಎಸ್.ನ ಅಖಿಲ ಭಾರತೀಯ ಪ್ರತಿನಿಧಿ ಸಭಾ ಭಾನುವಾರದಂದು ಹೊಸಬಾಳೆ ಅವರನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮೂರು ವರ್ಷಗಳಿಗಾಗಿ ಪುನರಾಯ್ಕೆ ಮಾಡಿದೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಹೊಸಬಾಳೆ, ಚುನಾವಣಾ ಬಾಂಡ್ ಒಂದು ಪ್ರಯೋಗವಾಗಿದೆ. ಈ ಬಗ್ಗೆ ಆರ್.ಎಸ್.ಎಸ್.ನಲ್ಲಿ ಇನ್ನೂ ಚರ್ಚಿಸಿಲ್ಲ ಎಂದಿದ್ದಾರೆ. ಹಠಾತ್ತನೆ ಚುನಾವಣಾ ಬಾಂಡ್‌ಗಳನ್ನು ಜಾರಿಗೆ ತಂದಿಲ್ಲ. ಸಮತೋಲನಗಳ ಕುರಿತು ಚರ್ಚಿಸಿದ ನಂತರ ಜಾರಿಗೆ ತರಲಾಗಿದೆ. ಈ ಹಿಂದೆಯೂ ಇಂಥದೇ ಯೋಜನೆಗಳು ಜಾರಿಯಲ್ಲಿದ್ದವು ಎಂದವರು ಹೇಳಿದ್ದಾರೆ.

ಯಾವುದೇ ಬದಲಾವಣೆ ಜಾರಿಗೆ ತಂದಾಗ ಪ್ರಶ್ನೆಗಳು ಹುಟ್ಟುತ್ತವೆ. ಮತಯಂತ್ರಗಳನ್ನು ಅಳವಡಿಸಿದಾಗಲೂ ಪ್ರಶ್ನೆಗಳನ್ನು ಕೇಳಲಾಗಿತ್ತು ಎಂದರು.

ಹೊಸ ವ್ಯವಸ್ಥೆ ಎಷ್ಟರ ಮಟ್ಟಿಗೆ ಪರಿಣಾಮಕಾರಿ ಹಾಗೂ ಲಾಭದಾಯಕ ಎಂಬುದನ್ನು ಸಮಯವೇ ನಿರ್ಧರಿಸುತ್ತದೆ. ಹೀಗಾಗಿ ಈ ವಿಷಯವನ್ನು ಪ್ರಯೋಗಕ್ಕೆ ಬಿಡಬೇಕು ಎಂದು ಹೊಸಬಾಳೆ ಹೇಳಿದ್ದಾರೆ.

# ಆನ್‌ಲೈನ್ ಬೆಟ್ಟಿಂಗ್ : ಬಾಘೇಲ್ ವಿರುದ್ಧ ಪ್ರಕರಣ

ರಾಯಪುರ, ಮಾ. 17 - ಮಹಾದೇವ್ ಆನ್‌ಲೈನ್ ಬೆಟ್ಟಿಂಗ್ ಹಗರಣಕ್ಕೆ ಸಂಬಂಧಿಸಿದಂತೆ ಛತ್ತೀಸ್‌ಘಡದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ವಿರುದ್ಧ ಆರ್ಥಿಕ ಅಪರಾಧಗಳ ದಳ ಪ್ರಕರಣ ದಾಖಲಿಸಿದೆ.

ಜಾರಿ ನಿರ್ದೇಶನಾಲಯ ಸಲ್ಲಿಸಿದ ವರದಿ ಆಧರಿಸಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಳೆದ ಒಂದು ವರ್ಷದಿಂದ ಈ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. ಈ ಪ್ರಕರಣದಲ್ಲಿ ಸುಮಾರು 6,000 ಕೋಟಿ ರೂ.ಗಳ ಅಪರಾಧ ನಡೆಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ಆರೋಪಿಸಿದೆ.

ಜಾರಿ ನಿರ್ದೇಶನಾಲಯದ ವರದಿ ಆಧರಿಸಿ ಬಾಘೇಲ್, ಆಪ್ ಪ್ರವರ್ತಕರಾದ ರವಿ ಉಪ್ಪಲ್, ಸೌರಭ್ ಚಂದ್ರಕರ್, ಶುಭಂ ಸೋನಿ ಹಾಗೂ ಅನಿಲ್ ಕುಮಾರ್ ಅಗರ್‌ವಾಲ್ ಹಾಗೂ ಇತರೆ 14 ಜನರ ವಿರುದ್ಧ ಮಾರ್ಚ್ 4ರಂದು ಎಫ್.ಐ.ಆರ್. ದಾಖಲಿಸಲಾಗಿದೆ.

# ಮಾಯಕೊಂಡ ಕ್ಷೇತ್ರದಲ್ಲಿ ರಸ್ತೆ ಅಭಿವೃದ್ಧಿಗೆ 60 ಕೋಟಿ ರೂ. ಅನುದಾನ ಮಂಜೂರು



## ಶಾಸಕ ಬಸವಂತಪ್ಪ

ದಾವಣಗೆರೆ, ಮಾ. 17- ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಹಾಳಾದ ರಸ್ತೆಗಳ ಅಭಿವೃದ್ಧಿ ಮತ್ತು ಶಾಲೆ, ಕಾಲೇಜು, ಭವನ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರ ಅಂದಾಜು 60 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ತಿಳಿಸಿದರು.

ಕ್ಷೇತ್ರದ ವ್ಯಾಪ್ತಿಯ ಕಂದಗಲ್ಲು ಗ್ರಾಮದಲ್ಲಿ ಶನಿವಾರ 50 ಲಕ್ಷ ರೂ. ವೆಚ್ಚದಲ್ಲಿ ಎರಡೂವರೆ ಕಿ.ಮೀ. ದೂರದ ಕಂದಗಲ್ಲು-ಬೆಳ್ಳಿಗನೂಡು ಗ್ರಾಮಗಳ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಕಷ್ಟು ರಸ್ತೆಗಳು ಹಾಳಾಗಿದ್ದವು. ಅಲ್ಲದೇ ಶಾಲೆ, ಕಾಲೇಜು, ಭವನ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಸಂಬಂಧ ಅಧಿವೇಶನದಲ್ಲಿ ಚರ್ಚಿಸಿ ಸಂಬಂಧಪಟ್ಟ ಸಚಿವರ ಗಮನ ಸೆಳೆಯಲಾಗಿತ್ತು. ಅಲ್ಲದೇ ಮುಖ್ಯಮಂತ್ರಿಗಳಿಗೂ ಮನವಿ ಮಾಡಲಾಗಿತ್ತು. ಈಗ ಕ್ಷೇತ್ರದ ವ್ಯಾಪ್ತಿಯ ಹಾಳಾದ ರಸ್ತೆಗಳ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ವಿಶೇಷ ನಿಧಿಯಡಿ 25 ಕೋಟಿ ರೂ., ಲೋಕೋಪಯೋಗಿ ಇಲಾಖೆಯಡಿ 20 ಕೋಟಿ ರೂ. ಅನುದಾನ ಬಿಡುಗಡೆಗೆ ಸರ್ಕಾರ ಮಂಜೂರಾತಿ ನೀಡಿದೆ ಎಂದು ತಿಳಿಸಿದರು.

ಅಲ್ಲದೇ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೂ ಅನುದಾನ ಬಿಡುಗಡೆಯಾಗಿದ್ದು, ಅಲ್ಪಸಂಖ್ಯಾತರ ಇಲಾಖೆಯಡಿ 5ಕೋಟಿ ರೂ. ಅನುದಾನ ಸೇರಿ ಒಟ್ಟು ಕ್ಷೇತ್ರದ ಅಭಿವೃದ್ಧಿಗೆ 60 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಕ್ಷೇತ್ರದಲ್ಲಿ ರಸ್ತೆಗಳು ಹಾಳಾಗಿರುವುದರಿಂದ ವಿಶೇಷ ಗಮನ ಹರಿಸಿ ಈಗ ರಸ್ತೆಗಳ ಅಭಿವೃದ್ಧಿಗೆ ಮುಂದಾಗಿದ್ದು, ಈಗಾಗಲೇ ರಸ್ತೆಗಳ ಅಭಿವೃದ್ಧಿಗೆ ಟೆಂಡರ್ ಕರೆಯಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಹಾಳಾದ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು.

ಒಮ್ಮೆ ಮಾಡಿದ ಕೆಲಸ ಶಾಶ್ವತವಾಗಿ ಉಳಿಯಬೇಕು. ಅದು ಸಾರ್ವಜನಿಕರಿಗೆ ಉಪಯೋಗಕ್ಕೆ ಬರಬೇಕು. ಅದಾದಾಗ ಮಾತ್ರ ನಮಗೂ, ನಿಮಗೂ ಒಳ್ಳೆಯ ಹೆಸರು ಬರುತ್ತದೆ. ಇಲ್ಲದಿದ್ದರೆ ಸಾರ್ವಜನಿಕರಿಂದ ಹಿಡಿಶಾಪ ಹಾಕಿಸಿಕೊಳ್ಳಬೇಕಾಗುತ್ತದೆ. ಗುಣಮಟ್ಟದ ಕಾಮಗಾರಿ ನಡೆಸಬೇಕೆಂದು ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಕಳಪೆ ಕಾಮಗಾರಿ ಆಗಿದೆ ಎಂದು ದೂರುವ ಬದಲು, ನೀವು ಕೂಡ ಗುಣಮಟ್ಟದ ಕಾಮಗಾರಿ ಆಗುವಂತೆ ಆಗಾಗ ಪರಿಶೀಲನೆ ನಡೆಸಬೇಕು. ಆಗ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸಲು ಸಾಧ್ಯವಾಗುತ್ತದೆ ಎಂದು ಗ್ರಾಮಸ್ಥರಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಲ್ಯಾಂಡ್ ಆರ್ಮಿ ಇಂಜಿನಿಯರ್ ರೇಣುಕಪ್ಪ, ಇಂಜಿನಿಯರ್ ವಸಂತಕುಮಾರ್, ಹಾಲೇಶಣ್ಣ, ಗಂಗಜ್ಜ, ವೀರಾಚಾರಿ, ಚಂದ್ರಪ್ಪ, ಜಯಬಾಬಣ್ಣ, ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ಗ್ರಾಮಸ್ಥರು ಇದ್ದರು.

# ವನಿತಾ ಸಮಾಜದ ಡಿಜಿಟಲ್ ಲೈಬ್ರರಿಗೆ 25 ರಂದು ಚಾಲನೆ

ದಾವಣಗೆರೆ, ಮಾ. 17 - ನಗರದ ವನಿತಾ ಸಮಾಜದ ವತಿಯಿಂದ ಇದೇ ದಿನಾಂಕ 25 ರಂದು 'ವನಿತಾ ಡಿಜಿಟಲ್ ಲೈಬ್ರರಿ' ಆರಂಭಿಸಲಾಗುವುದು ಲೈಬ್ರರಿ ಅಧ್ಯಕ್ಷರಾದ ರೇಖಾ ಪ್ರಸನ್ನಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವನಿತಾ ಸಮಾಜವು ಕಳೆದ 60 ವರ್ಷಗಳಿಂದ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದು, ವಿವಿಧ ಅಂಗಸಂಸ್ಥೆಗಳನ್ನು ಹೊಂದಿದ್ದು, ಡಿಜಿಟಲ್ ಲೈಬ್ರರಿ ಆರಂಭಿಸುವ ಮೂಲಕ ಬ್ಯಾಂಕಿಂಗ್, ಐಎಎಸ್, ಐಪಿಎಸ್ ಪರೀಕ್ಷೆಗಳಿಗೆ ಉಚಿತ ತರಬೇತಿಯನ್ನು ನೀಡಲು ಚಿಂತನೆ ನಡೆಸಲಾಗಿದೆ ಎಂದರು.

ಡಿಜಿಟಲ್ ಲೈಬ್ರರಿ ಆರಂಭಿಸಲು ಮಾಜಿ ಮೇಯರ್ ಎಸ್.ಟಿ. ವೀರೇಶ್, ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್ ಸಾಕಷ್ಟು ಸಹಕಾರ ನೀಡಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ಆನ್‌ಲೈನ್ ತರಬೇತಿ ಯನ್ನು ಇನ್‌ಸೈಟ್ಸ್ ಐಎಎಸ್ ಸಂಸ್ಥೆ ವತಿಯಿಂದ ನೀಡುವುದಾಗಿ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ಭರವಸೆ ನೀಡಿದ್ದಾರೆ. ಅವರ ಸಂಸ್ಥೆ ಸಹಯೋಗದಲ್ಲಿ ತರಬೇತಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಆನ್‌ಲೈನ್ ತರಗತಿಗಳು ಇದೇ ದಿನಾಂಕ 25 ರಿಂದ ಆರಂಭವಾಗಲಿವೆ. ಇದೇ ದಿನಾಂಕ 16 ರಿಂದ ವನಿತಾ ಸಮಾಜದಲ್ಲಿ ಅರ್ಜಿಗಳನ್ನು ವಿತರಿಸಲಾಗುವುದು. ಆಸಕ್ತರು ಪುಷ್ಪಾ (9964913202), ಮಂಗಳ (9964114869) ಅವರನ್ನು ಸಂಪರ್ಕಿಸುವಂತೆ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ವನಿತಾ ಸಮಾಜದ ಪದಾಧಿಕಾರಿಗಳಾದ ಪದ್ಮಾ ಪ್ರಕಾಶ್, ವಾಗ್ದೇವಿ, ನಾಗರತ್ನ ಜಗದೀಶ್, ಶೀಲಾ ನಲ್ಲೂರು, ಸುಮಾ ಶಶಿಧರ್, ವಿಜಯಕುಮಾರಿ, ಡಾ. ಎಸ್. ಶುಭಾ ಪಾಟೀಲ್ ಉಪಸ್ಥಿತರಿದ್ದರು.

# ಸ್ವತಂತ್ರ ಸ್ಪರ್ಧೆ : ಈಶ್ವರಪ್ಪ

**(1ನೇ ಪುಟದಿಂದ)** ಹೇಳಿರುವ ಈಶ್ವರಪ್ಪ, ಪಕ್ಷದಲ್ಲಿ ಅನೇಕ ಹಿಂದುತ್ವ ವಾದಿಗಳಿಗೆ ಮೋಸವಾಗಿದೆ. ಈ ಕಾರಣಕ್ಕಾಗಿಯೇ ನಾನು ಪಕ್ಷದ ಹಿತದೃಷ್ಟಿಯಿಂದ ಸ್ವತಂತ್ರವಾಗಿ ಸ್ಪರ್ಧಿಸಲು ಮುಂದಾಗಿದ್ದೇನೆ. ನನ್ನ ನಿಲುವನ್ನು ಮೋದಿ ಮೆಚ್ಚುತ್ತಾರೆ ಎಂಬ ವಿಶ್ವಾಸ ಇದೆ ಎಂದರು.

ಬಿಜೆಪಿ ರಾಜ್ಯ ಉಸ್ತುವಾರಿ ರಾಧಾ ಮೋಹನ್ ಅಗರ್‌ವಾಲ್ ಹಾಗೂ ಬಿಜೆಪಿ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಅವರು ನನ್ನ ಮನೆಗೆ ಬಂದಿದ್ದರು. ಚುನಾವಣೆಯಿಂದ ಹಿಂದೆ ಸರಿಯುವ ಕುರಿತು ಚರ್ಚಿಸಿದ್ದರು ಎಂದು ಈಶ್ವರಪ್ಪ ಹೇಳಿದರು.

ನನ್ನ ಮಗ ಕಾಂತೇಶ್‌ರನ್ನು ಪರಿಷತ್ ಸದಸ್ಯರನ್ನಾಗಿ ಮಾಡುವ ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ. ಆದರೆ, ಪರಿಷತ್ ಸ್ಥಾನ ನನ್ನ ಉದ್ದೇಶ ವಲ್ಲ. ಪಕ್ಷ ಶುದ್ಧೀಕರಣವೇ ನನ್ನ ಉದ್ದೇಶ ಎಂದು ತಿಳಿಸಿದ್ದೇನೆ ಎಂದರು. ಒಂದು ಕುಟುಂಬದ ಕಾರಣದಿಂದ ಇಡೀ ರಾಜ್ಯದ ಅನೇಕ ಕಾರ್ಯ ಕರ್ತರು ಹಾಗೂ ಹಿರಿಯರು ನೋವು ಅನುಭವಿಸುತ್ತಿದ್ದಾರೆ. ಹಿಂದುತ್ವ ವಾದಿಗಳನ್ನು ತುಳಿಯುತ್ತಿದ್ದಾರೆ. ಹಿಂದುತ್ವ ಹಾಗೂ ಪಕ್ಷ ಉಳಿಸಬೇಕು. ಹಾಗೂ ಕುಟುಂಬವಾದ ಹೋಗಬೇಕು ಎಂಬ ಅಂಶದಿಂದ ಸ್ಪರ್ಧಿಸುತ್ತಿ ರುವುದನ್ನು ಅವರ ಗಮನಕ್ಕೆ ತಂದಿದ್ದೇನೆ ಎಂದು ಹೇಳಿದರು.

# ಹಡಗಲಿ ಬಳಿ ಅಪಘಾತ : ಸಾವು

ಹೂವಿನಹಡಗಲಿ, ಮಾ. 17- ಚಾಲಕನ ನಿಯಂತ್ರಣ ತಪ್ಪಿ ಸಿಲಿಂಡರ್ ವಾಹನ ಪಲ್ಟಿಯಾಗಿ ಸಪ್ಲೈಯರ್ ಸ್ಥಳದಲ್ಲೇ ಸಾವಿಗೀಡಾದ ಘಟನೆ ಹಿರೇಹಡಗಲಿ ಹಾಗೂ ಹಗರನೂರು ಮಧ್ಯೆ ಸಂಭವಿಸಿದೆ. ಹಿರೇಹಡಗಲಿ ಗ್ರಾಮದ ಬೀರಬ್ಬಿ ಕಾಶೀಂಸಾಬ್ (40) ತಂದೆ ಪಕ್ಕೀರಸಾಬ್ ಮೃತಪಟ್ಟ ವ್ಯಕ್ತಿ. ವಾಹನವು ಹಿರೇಹಡಗಲಿ ಭಾರತ್ ಗ್ಯಾಸ್ ಏಜೆನ್ಸಿಗೆ ಸೇರಿದ್ದು ಎಂದು ಹೇಳಲಾಗಿದೆ.

# ಪುತಿನ್ ಪುನರಾಯ್ಕೆ ನಿಶ್ಚಿತ

**(1ನೇ ಪುಟದಿಂದ)** ಟೀಕಾಕಾರರಲ್ಲಿ ಹಲವರು ಜೈಲಿನಲ್ಲಿದ್ದರೆ, ಇನ್ನೂ ಹಲವರು ದೇಶಭ್ರಷ್ಟ ರಾಗಿದ್ದಾರೆ. ಪುತಿನ್ ಈಗ ಮೂವರು ಸಾಂಕೇತಿಕ ಎದುರಾಳಿಗಳನ್ನು ಹೊಂದಿದ್ದಾರೆ. ಅವರು ಪುತಿನ್ ಅವರ 24 ವರ್ಷದ ಆಡಳಿತ ಇಲ್ಲವೇ ಉಕ್ರೇನ್ ವಿರುದ್ಧದ ಸಮರವನ್ನು ಟೀಕಿಸುತ್ತಿಲ್ಲ.



# ಗಮನ ಸೆಳೆದ ಶ್ರೀನಿವಾಸ ಕಲ್ಯಾಣ ವೈಭವ

**(1ನೇ ಪುಟದಿಂದ)** ಚಾಲನೆ ದೊರೆಯಿತು. ಸ್ವಾಮಿಗೆ ಮಂಗಳ ಸ್ನಾನ ಮಾಡಿಸಿ ಮಂಗಳಾರತಿ ಬೆಳಗಲಾಯಿತು. ಅಭಿಷೇಕ, ಪುಣ್ಯಾಹ ವಾಚನ, ಒರಳು ಪೂಜೆ, ಬಳಿ ಕೊಡಿಸುವ ಶಾಸ್ತ್ರ, ಮಾಂಗಲ್ಯ ಧಾರಣೆ ಎಲ್ಲವೂ ಶಾಸ್ತ್ರೋಕ್ತವಾಗಿ ನೆರವೇರಿದವು.

ಸಭಾಂಗಣದಲ್ಲಿ ಗೋವಿಂದ ನಾಮ ಸ್ಮರಣೆ, ಹರೇ ಶ್ರೀನಿವಾಸ, ಗುರು ರಾಘವೇಂದ್ರ, ಹರೇ ರಾಮ ಹರೇ ರಾಮ ಎಂದು ಭಗವಂತನಿಗೆ ಪ್ರಾರ್ಥನೆ ಸಲ್ಲಿಸಲಾಯಿತು. ಕೌತಾಳಂ ಶ್ರೀ ಗುರು ಜಗನ್ನಾಥ ಸೇವಾ ಸಮಿತಿಯವರು ಕಲ್ಯಾಣೋತ್ಸವವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಪಲಿಮಾರು ಶ್ರೀಗಳ ಉಪಸ್ಥಿತಿಯಲ್ಲಿ ಎಲ್ಲವೂ ಸಂಗವಾಗಿ ನಡೆಯಿತು. ಕೆ. ಅಪ್ಪಣ್ಣಾಚಾರ್ಯ, ಸದಾನಂದ ಶಾಸ್ತ್ರಿಗಳು, ಸಂಪನ್ನ ಮುತಾಲಿಕ್, ಕಂಪ್ಲಿ ಗುರುರಾಜಾಚಾರ್ ಸೇರಿ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರಾಹುಲ್ ಜೋಡೋ ಯಾತ್ರೆ ಸಂಪೂರ್ಣ

**(1ನೇ ಪುಟದಿಂದ)** ಅವರ ಗ್ಯಾರಂಟಿ ಶ್ರೀಮಂತರಿಗೆ ಸೀಮಿತವಾಗಿದೆ. ಪ್ರತಿಪಕ್ಷಗಳು ಜನ ಸಾಮಾನ್ಯರಿಗೆ ಗ್ಯಾರಂಟಿ ನೀಡುತ್ತಿವೆ ಎಂದರು.

ಎನ್.ಸಿ.ಪಿ. ಸ್ಥಾಪಕ ಶರದ್ ಪವಾರ್ ಮಾತನಾಡಿ, ಮಹಾತ್ಮ ಗಾಂಧಿ ಅವರು ಮುಂಬೈನಲ್ಲಿ ಕ್ವಿಟ್ ಇಂಡಿಯಾ ಕರೆ ನೀಡಿದ್ದರು. ಈಗ ಐ.ಎನ್.ಡಿ.ಐ.ಎ. ನಾಯಕರು ಬಿಜೆಪಿಯನ್ನು ಅಧಿಕಾರದಿಂದ ಕಿತ್ತೆಸೆಯಲು ಪಣ ತೊಡಬೇಕು ಎಂದರು.


**ಸೈಟ್, ಮನೆ ಬೇಕಾಗಿದೆ**
ಅರ್ಧ (1/2%) ಪರ್ಸೆಂಟ್ ಕಮೀಷನ್‌ಗೆ ಮಾರಿಸುತ್ತೇವೆ ಮತ್ತು ಕೊಡಿಸುತ್ತೇವೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409
97315 63409

**ಮನೆಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 North, 30x40 West, ಡುಪ್ಲೆಕ್ಸ್ ಹೊಸ ಮನೆಗಳು 40x60 East ಸೈಟ್.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಪ್ರಾಪರ್ಟಿ ಹಬ್**
ಈ ಸಿ
ಈ - ಸ್ವತ್ತು
ಕಟ್ಟಡ ಲೈಸನ್ಸ್
ಖಾತೆ ಬದಲಾವಣೆ
96118 66449

**ಬೇಕಾಗಿದ್ದಾರೆ**
Driver ಬೇಕಾಗಿದ್ದಾರೆ.
Salary Basis.
Contact No :
80882 10419

**ನಾಟಿ ಕೋಳಿ ಹಾಗೂ ಮೊಟ್ಟೆ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಆದಿತ್ಯ ಬಿರ್ಲಾ ಲೆನಿನ್ ಕ್ಲಬ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನಿಭವವುಳ್ಳ ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ.
ಶಾಮನೂರು ರೋಡ್, ದಾವಣಗೆರೆ.
74114 07411

**FOR SALE**
3 Floor house at P.J Extension is for Sale. Suitable for Clinic & Consultation
70222 11442

**ತೆಂಗಿನ ತೋಟದ ಜಮೀನು ಮಾರಾಟಕ್ಕಿದೆ**
ಕುರುಬರಹಳ್ಳಿ ಹೊಸದುರ್ಗ(ತಾ) ಚಿತ್ರದುರ್ಗ(ಜಿ) ಹೊಸದುರ್ಗ ನಗರದ ಹತ್ತಿರ 16.20 ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
89705 35190, 94403 84615

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ದಾವಣಗೆರೆ ನಗರದ ಕಾಲೇಜು ಹಾಸ್ಟೆಲ್ ನಲ್ಲಿ ಅಡುಗೆ ಭಟ್ಟರು ಬೇಕಾಗಿದ್ದಾರೆ.
ಆಕರ್ಷಕ ಸಂಬಳ ನೀಡಲಾಗುವುದು.
ಸಂಪರ್ಕಿಸಿ :
90199 32282

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಮೂರು ಬೆಡ್ ರೂಮ್ ಮನೆಗಳು, ಮೊದಲನೇ ಮಹಡಿಗಳಲ್ಲಿ (ಸಸ್ಯಹಾರಿಗಳಿಗೆ ಮಾತ್ರ)
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80, 50x80 North ಅಕ್ಕ-ಪಕ್ಕ, 40x60, 40x60 South ಅಕ್ಕ-ಪಕ್ಕ, 50x80 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಓದುಗರ ಗಮನಕ್ಕೆ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**TO-LET**
1) Ground floor 2 BHK house for commercial.
2) 2nd floor, 2 BHK house for rent / lease at P.J Extension, Near church.
76764 92366

**WANTED**
Any Degree with Computer knowledge is must. for Male & Female.
Contact : Exellent Electronics
#2137/1, 4th Main, 3rd Cross, MCC 'A' Block, Davanagere - 577004
98865 15100

**ಹೋಟೆಲ್ ಉದ್ಯಮಕ್ಕೆ**
ಕೆಲಸಗಾರರು ಬೇಕಾಗಿದ್ದಾರೆ
ಕ್ಲರ್ಕ್ಸ್ ಇನ್
ಶಾಮನೂರು ರಸ್ತೆ, ದಾವಣಗೆರೆ.
70190 51306

**WANTED**
* TALLY OPERATOR (MALE)
* DRIVER CUM DELIVERY BOYS
Contact
VEERNARYANA TRADERS
N.R.ROAD, DAVANGERE
98860 97065

**ಬೇಕಾಗಿದ್ದಾರೆ**
Team leader ಆಗಿ ಕೆಲಸ ಮಾಡಲು target ಇಲ್ಲದ, ಬೇರೆ ಬೇರೆ ಜಿಲ್ಲೆಗಳಿಗೆ ಹೋಗಲು ತಯಾರಿರುವವರು, Bangalore area ಚೆನ್ನಾಗಿ ಗೊತ್ತಿರುವರಿಗೆ ಆದ್ಯತೆ.
80882 10419

**ನೆಲ ಬಾಡಿಗೆ / ಲೀಜ್‌ಗೆ**
Built to Suit ಆದರದಲ್ಲಿ ಕಟ್ಟಡ ಕಟ್ಟಿಸಿ ಕೊಡಲಾಗುವುದು.
ಸೈಜ್ : 60x40, ಸಂಪರ್ಕಿಸಿ.
ಎಸ್.ಎಸ್.ಲೇಔಟ್, ರಿಂಗ್ ರೋಡ್ ಹತ್ತಿರ, ಸಪ್ತಗಿರಿ ಸ್ಕೂಲ್ ಹತ್ತಿರ.
98442 08011

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಎಕ್ಸಿಕ್ಯೂಟಿವ್ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ / ಮ್ಯಾನೇಜರ್, ಡೆಲಿವರಿ ಬಾಯ್ & ಡ್ರೈವರ್
SJV MART ಗೆ ಬೇಕಾಗಿದ್ದಾರೆ. ಸಂಪರ್ಕಿಸಿ :
89045 80039 / 36
73493 91298

**ROOM FOR RENT**
Single ROOM at Second floor, Avialabel for rent.
Address : #1982/2, 6th Cross, Siddaveerappa Layout, Davanagere.
94806 93506

**ಬೇಕಾಗಿದ್ದಾರೆ**
SV Marketing, Davanagere, P.B. Road. * ಆಟೋ ಡ್ರೈವರ್, * ಸೇಲ್ಸ್ ಎಕ್ಸಿಕ್ಯೂಟಿವ್, * ಅಂಗಡಿಯಲ್ಲಿ ಕೆಲಸ ಮಾಡುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
63020 23451, 97434 37003

**ಮನೆ ಲೀಸ್‌ಗೆ ಇದೆ**
24ನೇ ವಾರ್ಡ್‌ನ, # 337/101ರಲ್ಲಿ 2BHK ಮನೆ ಲೀಸ್‌ಗೆ ಇದೆ. Near KSRTC Bus Stand, ಗಣೇಶ್ ಲೇಔಟ್, ದಾವಣಗೆರೆ.
98800 56262

**IMMEDIATELY WANTED TEACHERS**
BS.c, BE.d - 3, PCM/ CBZ.
Intrested candidates can immediately apply to: 1.vinayaka convent Ganeshpet. Kalikadevi road dvg.
2. Vinayaka public school kondajji road, near HP gas godown dvg. BA, BE.d - 3.
Computer teacher - 1. NTC - 3.
PH : 95356 10817
Note: we will be given attractive salary to right candidates.

ಶ್ರೀ ದುಗ್ಗಮ್ಮದೇವಿ ಪ್ರಸನ್ನ
**ಟಗರು ಮಾರಾಟಕ್ಕಿದೆ**
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544

# ಶಿಕ್ಷಣದ ಜೊತೆಗೆ ಆರೋಗ್ಯವೂ ಮುಖ್ಯ




## ಆರ್.ಜಿ. ಕಾಲೇಜಿನಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ

ದಾವಣಗೆರೆ, ಮಾ.17- ನಗರದ ಆರ್.ಜಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಕಾಲೇಜಿನ ಎನ್.ಎಸ್.ಎಸ್ ಘಟಕ-1, ವಾಸನ್ ಕಣ್ಣಿನ ಆಸ್ಪತ್ರೆ, ಡಾ. ಜಯೇಶ್ ದಂತ ವೈದ್ಯರು, ಚರ್ಮ ರೋಗ ತಜ್ಞ ಡಾ. ಭಕ್ತವತ್ಸಲ ಅವರುಗಳ ಸಹಯೋಗದಲ್ಲಿ ದಂತ, ಚರ್ಮ, ಕಣ್ಣಿನ ಉಚಿತ ತಪಾಸಣಾ ಶಿಬಿರವನ್ನು ಆರ್.ಜಿ. ಕಾಲೇಜಿನಲ್ಲಿ ಇಂದು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ತಜ್ಞರು ವಿದ್ಯಾರ್ಥಿಗಳನ್ನು ಮತ್ತು ಅವರ ಪೋಷಕರನ್ನು ಉದ್ದೇಶಿಸಿ ಆರೋಗ್ಯದ ಕುರಿತಾಗಿ ವಹಿಸಬೇಕಾದ ಪ್ರಾಥಮಿಕ ಕಾಳಜಿಯ ಕುರಿತು ಮಾತನಾಡಿದರು.

ಆರ್.ಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಪಿ.ಎಸ್. ಶಿವಪ್ರಕಾಶ್ ಅವರು ಮಾತನಾಡಿ, ಶಿಕ್ಷಣದ ಜೊತೆಗೆ ಆರೋಗ್ಯವೂ ಸಹ ವ್ಯಕ್ತಿಯ ಸಾಮಾಜಿಕ ಜೀವನದಲ್ಲಿ ಬಹುಮುಖ್ಯವಾಗಿದೆ ಹಾಗೂ ಸಾಮಾಜಿಕ ಕಳಕಳಿಯನ್ನೂ ಸಹ ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ಇದಕ್ಕೆ ಪೂರಕವಾಗಿ ರಾಷ್ಟ್ರೀಯ ಸೇವಾ ಯೋಜನೆ ಸಹಕಾರಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಆರ್.ಜಿ ಸ್ನಾತಕ ಪದವಿ ಕಾಲೇಜಿನ ಪ್ರಾಂಶುಪಾಲರಾದ ಗೀತಾ ಜಿ.ಕೆ, ಎಂ.ಕಾಂ.ಸ್ನಾತಕೋತ್ತರ ಪದವಿ ಕಾಲೇಜಿನ ಪ್ರಾಂಶುಪಾಲರಾದ ಸುನೀಲ್ ಕುಮಾರ್ ಸಿ. ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಎಲ್.ಎಂ. ಶರಣಕುಮಾರ ನೆರವೇರಿಸಿದರು. ಇವರೊಟ್ಟಿಗೆ ಕಾರ್ಯಕ್ರಮದ ನಿರ್ವಹಣೆಯಲ್ಲಿ ಕಾಲೇಜಿನ ಎನ್.ಎಸ್.ಎಸ್ ಸ್ವಯಂ ಸೇವಕ ವಿಷ್ಣುಸೇನಾ ಡಿ.ಎಸ್, ಧ್ರುವ ಎಸ್.ವೈ, ಗಣೇಶ್ ಬಿ., ಚೇತನ್ ಎಸ್.ದೀಕ್ಷಿತ್, ಲೋಹಿತ್ ಎಂ. ಸಹಕರಿಸಿದರು.

## ಇಂದಿನಿಂದ ಕಾಲಸಿದ್ಧಿ ಹನುಮಾನ್ ದೇವಾಲಯ ಉದ್ಘಾಟನಾ ಕಾರ್ಯಕ್ರಮ

ಚನ್ನಗಿರಿ ಬಿ.ಹೊಸಹಳ್ಳಿಯಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಸಿದ್ಧಿ ಹನುಮಾನ್ ದೇವಸ್ಥಾನದ ಉದ್ಘಾಟನಾ ಸಮಾರಂಭ ಜರುಗಲಿದೆ.

ನೂತನವಾಗಿ ನಿರ್ಮಿಸಿರುವ ದೇವಾಲಯದ ದಿವ್ಯ ವಾತಾವರಣವನ್ನು ನೋಡಿ ಕಣ್ತುಂಬಿಕೊಳ್ಳಲು ದೇವಸ್ಥಾನ ಸಮಿತಿ ಮತ್ತು ಅರ್ಚಕ ಅಪ್ಪಾಜಿ ವರಪ್ರಸಾದ್ ಶರ್ಮಾ ಮತ್ತು ತಂಡದವರು ಭಕ್ತರನ್ನು ಆಹ್ವಾನಿಸಿದ್ದಾರೆ.

ಎಲ್ಲೆಡೆಯಿಂದ ಬರುವ ಯಾತ್ರಾರ್ಥಿಗಳನ್ನು ಸ್ವಾಗತಿಸಲು ಗ್ರಾಮಸ್ಥರು ಪುಳಕಿತರಾಗಿದ್ದಾರೆ. ಆಯೋಧ್ಯೆಯ ರಾಮ್ ಲಲ್ಲಾ ಶಿಲ್ಪದ ಕಲಾವಿದ ಅರುಣ್ ಯೋಗಿ ರಾಜ್ ಅವರ ಶಿಲ್ಪದಿಂದ ಅಲಂಕರಿಸಲ್ಪಟ್ಟ ಈ ಸುಂದರವಾದ ದೇವಾಲಯ ಉದ್ಘಾಟನೆಗೊಳ್ಳಲಿದೆ.

# ಎಲ್ಲರ ಸಹಭಾಗಿತ್ವದಲ್ಲಿದೆ ಪ್ರಜಾಪ್ರಭುತ್ವ: ವೆಂಕಟೇಶ್

## ಹಾಟ್ ಏರ್ ಬಲೂನ್ ಹಾರಾಟದ ಮೂಲಕ ಮತದಾನ ಜಾಗೃತಿ






ದಾವಣಗೆರೆ, ಮಾ.17 - ಪ್ರಜಾಪ್ರಭುತ್ವದಲ್ಲಿ ಎಲ್ಲರ ಸಹಭಾಗಿತ್ವ ಅವಶ್ಯಕ, ಎಲ್ಲರೂ ಲೋಕಸಭಾ ಚುನಾವಣಾ ಹಬ್ಬದಲ್ಲಿ ಭಾಗವಹಿಸುವ ಮೂಲಕ ಪ್ರಜಾತಂತ್ರವನ್ನು ಆರಾಧಿಸಬೇಕೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಕರೆ ನೀಡಿದರು.

ಶನಿವಾರ ನಗರದ ಹೈಸ್ಕೂಲ್ ಮೈದಾನದಲ್ಲಿ ಜಿಲ್ಲಾ ಸ್ವೀಪ್ ಸಮಿತಿ, ಯುವಜನ ಕ್ರೀಡಾ ಇಲಾಖೆ ಹಾಗೂ ಮಾ ಸಾಹಸ ಕ್ರೀಡಾ ಅಕಾಡೆಮಿ ಸಹಭಾಗಿತ್ವದಲ್ಲಿ ಮತದಾರರ ಜಾಗೃತಿಗೆ ಆಯೋಜಿಸಲಾದ ಹಾಟ್ ಏರ್ ಬಲೂನ್ ತರಬೇತಿಗೆ ಚಾಲನೆ ನೀಡಿ ಖುದ್ದು ಹಾರಾಟದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಲೋಕಸಭಾ ಚುನಾವಣೆ ನಡೆಯುತ್ತಿದ್ದು, ದಾವಣಗೆರೆ ಕ್ಷೇತ್ರಕ್ಕೆ ಮೇ 7 ರಂದು ಮತದಾನ ನಡೆಯಲಿದೆ. ಯುವ ಮತದಾರರು ಏಪ್ರಿಲ್ 9 ರೊಳಗಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರ್ಪಡೆ ಮಾಡುವ ಮೂಲಕ ಚುನಾವಣೆಯಲ್ಲಿ ಮತ ಚಲಾಯಿಸಬೇಕೆಂದರು.

ಒಂದು ಮತ ಅನೇಕ ಅಶ್ವಶಕ್ತಿಗೆ ಸಮವಾಗಿದ್ದು ಯಾರೂ ಸಹ ಮತದಾನದಿಂದ ಹೊರಗುಳಿಯದೇ ಮತದಾನ ಮಾಡಬೇಕೆಂದ ಅವರು ಕರೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಮಾತನಾಡಿ, ಮತದಾರರ ಪಟ್ಟಿಯನ್ನು ಅವಲೋಕಿಸಿ ಸೇರ್ಪಡೆ ಮತ್ತು ತಿದ್ದುಪಡಿ ಇದ್ದಲ್ಲಿ ಏಪ್ರಿಲ್ 9 ರೊಳಗಾಗಿ ಸಲ್ಲಿಸಬಹುದು. ಚುನಾವಣೆಗೆ ಸಂಬಂಧಿಸಿದ ಸಹಾಯಕ್ಕಾಗಿ 1950 ಟೋಲ್‌ಫ್ರೀ ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದರು.

ಜಿಲ್ಲಾ ರಕ್ಷಣಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಕೊಟ್ರೇಶ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ, ಯುವಜನ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಜಯಲಕ್ಷ್ಮಿಬಾಯಿ, ಯುವ ಪ್ರಶಸ್ತಿ ಪುರಸ್ಕೃತ ಮಾಗಾನಹಳ್ಳಿ ಮಂಜುನಾಥ್ ಉಪಸ್ಥಿತರಿದ್ದರು.

# ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವಕ್ಕೆ ಸಂಭ್ರಮದ ತೆರೆ



ದಾವಣಗೆರೆ, ಮಾ. 17- ಗುರು ರಾಯರ ಪಟ್ಟಾಭಿಷೇಕ ಮತ್ತು ವರ್ಧಂತಿಯ ಸಂಸ್ಮರಣೆಗಾಗಿ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಆಯೋಜನೆಗೊಂಡಿದ್ದ 31 ನೇ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವ ಭಾನುವಾರ ಸಂಭ್ರಮದ ತೆರೆ ಕಂಡಿತು.

ಮಂತ್ರಾಲಯ ಶ್ರೀ ರಾಘವೇಂದ್ರ ಸಪ್ತಾಹ ಕಾರ್ಯಾಚರಣ ಸಮಿತಿ, ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವ ಸಮಿತಿ ವತಿಯಿಂದ ಮಾ. 11 ರಿಂದ 17 ರವರೆಗೆ ಹಮ್ಮಿಕೊಂಡಿದ್ದ ಧಾರ್ಮಿಕ, ಸಾಂಸ್ಕೃತಿಕ ಹಬ್ಬಕ್ಕೆ ದೇವನಗರಿಯ ಭಕ್ತರು ಸಾಕ್ಷಿಯಾದರು. 7 ದಿನಗಳ ಕಾಲ ಶ್ರೀ ರಾಘವೇಂದ್ರ ಸಪ್ತಾಹ ಮಹೋತ್ಸವದ ಅಂಗವಾಗಿ ವಿಶೇಷ ಪೂಜೆ, ಅಭಿಷೇಕ, ಸುಪ್ರಭಾತ, ಹೋಮ, ಲಕ್ಷ ಪುಷ್ಪಾರ್ಚನೆ ಜತೆಗೆ ಪ್ರವಚನಗಳು ನಡೆದವು.

ವಿವಿಧ ಮಠಾಧೀಶರ ಸಾನ್ನಿಧ್ಯ ಮಹೋತ್ಸವದ ಕಳೆಯನ್ನು ಹೆಚ್ಚಿಸಿತು. ಪಂಡಿತರಿಂದ ಜ್ಞಾನ ಕಾರ್ಯ ನಡೆದರೆ, ವಿವಿಧ ಕಲಾವಿದರು ಸಂಗೀತ, ನೃತ್ಯ ಇನ್ನಿತರೆ ಕಲಾ ಪ್ರಕಾರಗಳ ಮೂಲಕ ಪಾಲ್ಗೊಂಡವರೆಲ್ಲರಿಗೂ ಗುರುರಾಯರ ಸ್ಮರಣೆ ಮಾಡಿಸಿದರು.

ಪಲಿಮಾರು ಮಠದ ಶ್ರೀಗಳು ಏಳು ದಿನಗಳ ಕಾಲ ಉಪಸ್ಥಿತರಿದ್ದು, ನಿತ್ಯವೂ ಅನುಗ್ರಹ ಸಂದೇಶವನ್ನು ನೀಡಿದರು. ಪೇಜಾವರ, ಅದಮಾರು, ಶ್ರೀ ಮಠದ ಸ್ವಾಮೀಜಿಗಳು ಆಗಮಿಸಿ ರಾಯರ ಮಹಿಮೆಯನ್ನು ಕೊಂಡಾಡಿದರು.

ಭರತನಾಟ್ಯ, ಕೊಳಲು, ವೀಣಾ ವಾದನ, ದಾಸವಾಣಿ ಜತೆಗೆ ವಿವಿಧ ಭಜನಾ ಮಂಡಳಿಯವರು ಉತ್ಸಾಹದಿಂದ ಪಾಲ್ಗೊಂಡು ಮಹೋತ್ಸವ ರಂಗೇರುವಂತೆ ಮಾಡಿದರು.

ರಸಪ್ರಶ್ನೆ ಸ್ಪರ್ಧೆ, ದಿಪೋತ್ಸವ, ಸಾಮೂಹಿಕ ಲಕ್ಷ್ಮೀ ಶೋಭಾನ ಪರಾಯಣ ಇನ್ನಿತರೆ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಉತ್ಸವ ಎರಡನೇ ದಿನ ಭವ್ಯ ಶೋಭಾಯಾತ್ರೆ ಜರುಗಿತು.

## ಎಲ್ಲಾ ಮಕ್ಕಳಿಗೂ ಧಾರ್ಮಿಕ ಅಭ್ಯಾಸ



ದಾವಣಗೆರೆ, ಮಾ. 17 - ನಮ್ಮ ಭಾರತೀಯ ಸಂಸ್ಕೃತಿಯ ಪದ್ಧತಿಯನ್ನು ಎಲ್ಲಾ ಮಕ್ಕಳು ಅವಶ್ಯಕವಾಗಿ ಕಲಿಯಬೇಕು. ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕೆಂದು ರಾಯರ ಮಠದ ಪ್ರಧಾನ ಅರ್ಚಕ ಕೃಷ್ಣಾಚಾರ್ ಹೇಳಿದರು.

ಹಲವು ಮಕ್ಕಳು ರಾಮಾಯಣ, ಭಗವದ್ಗೀತೆ, ವಿಷ್ಣು ಸಹಸ್ರನಾಮ, ಉಚಿತವಾಗಿ ಕಳೆದ ಒಂದು ತಿಂಗಳಿಂದ ಅಭ್ಯಾಸ ಮಾಡುತ್ತಿದ್ದಾರೆ. ಮಕ್ಕಳಿಗೆ ಹೆಚ್ಚು ಆಸಕ್ತಿ ಇರಬೇಕು, ಜೊತೆಯಲ್ಲಿ ಅವರ ತಾಯಂದಿರು ಹೆಚ್ಚು ಮಕ್ಕಳ ಬಗ್ಗೆ ಗಮನ ಹರಿಸಬೇಕು ಎಂದು ಹೇಳಿದರು.

ರಾಘವೇಂದ್ರ ಸ್ವಾಮಿ ಮಠದ ಸಭಾಂಗಣದಲ್ಲಿ ಉಚಿತವಾಗಿ ಸುಮಾರು 40 ಮಕ್ಕಳು ಭಾಗವಹಿಸುತ್ತಿದ್ದಾರೆ. ಈ ಒಂದು ಕಾರ್ಯಕ್ಕೆ ತಾಯಂದಿರೂ ಸಹ ಭಾಗವಹಿಸುತ್ತಿದ್ದಾರೆ. ಇದನ್ನು ಗಮನಿಸಿದ ಭರಮಸಾಗರ 'ಜನತಾವಾಣಿ' ವರದಿಗಾರ ಬಿ.ಜಿ. ಅನಂತಪದ್ಮನಾಭ ರಾವ್ ಅವರು, ಆಚಾರ್ ಅವರು ಮಾಡುತ್ತಿರುವ ಉತ್ತಮ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಭರಮಸಾಗರಕ್ಕೆ ತಾವು ಬಿಡುವು ಮಾಡಿ ಕೊಂಡು ಬರಲು ಮನವಿ ಮಾಡಿಕೊಂಡರು.

## ಒದುಗರ ಪತ್ರ

### 6 ಅಥವಾ 12 ವರ್ಷಕ್ಕೊಮ್ಮೆ ದುಗ್ಗಮ್ಮನ ಜಾತ್ರೆ ನಡೆಯಲಿ...

ಮಾನ್ಯರೇ,

ಕಳೆದ ದುರ್ಗಾಂಬಿಕಾ ಜಾತ್ರೆಯ ವೇಳೆ ಹಲವಾರು ಬಡವರು ಪಡೆದ ಸಾಲವೇ ಇನ್ನೂ ತೀರಿಸಿಲ್ಲ ಮತ್ತೆ ಜಾತ್ರೆ ಬಂದಿದೆ. ಇದರಿಂದ ಬಡವರಿಗೆ ಕಷ್ಟವಾಗುತ್ತಿದೆ. ಐದು ವರ್ಷಕ್ಕೊಮ್ಮೆ ಜಾತ್ರೆ ಆಚರಿಸುವುದು ಸೂಕ್ತ ಎಂದು ಕಾರ್ಮಿಕ ಮುಖಂಡ ಆವರಗೆರೆ ಉಮೇಶ್ ಹೇಳಿರುವುದು ಸ್ವಾಗತಾರ್ಹ. ಆದರೆ 6 ವರ್ಷ ಅಥವಾ 12 ವರ್ಷಕ್ಕೊಮ್ಮೆ ಜಾತ್ರೆ ನಡೆಸಲಿ ಎಂದು ನಮ್ಮ ವಿನಂತಿ.

ಆಹಾರ ಪದ್ಧತಿ ಅವರವರ ವೈಯಕ್ತಿಕ ಆಯ್ಕೆ. ಆದರೆ ದೇವರ ಹೆಸರಿನಲ್ಲಿ ಪ್ರಾಣಿ ಬಲಿ ಕೊಡುವುದು ಸೂಕ್ತವಲ್ಲ. ದೇವರು ಕರುಣಾಮಯಿ. ಯಾವ ದೇವರೂ ರಕ್ತ, ಮಾಂಸ ಬಯಸುವುದಿಲ್ಲ. ದೇವರಿಗೆ ಬೇಕಾಗಿರುವುದು ಬಲಿಯಲ್ಲ; ಭಕ್ತಿ. ಕಲೆ, ಸಾಹಿತ್ಯ, ಸಂಗೀತ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಜನರಿಗೆ ಅರಿವು ಮೂಡಿಸಿ ಇನ್ನೂ ವೈಭವಯುತವಾಗಿ ಜಾತ್ರೆ ಮಾಡಬಹುದು. ಅದಕ್ಕೆ ಯಾರ ಆಕ್ಷೇಪವೂ ಬರುವುದಿಲ್ಲ.

ಈ ಹಿಂದೆ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಮತ್ತು ಬಸವ ಬಳಗದ ಹಲವರು ಸೇರಿ ಸರಳ ಜಾತ್ರೆ ಮಾಡಬೇಕು, ಕೋಣ ಕಡಿಯಬಾರದೆಂದು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡಿದ್ದೆವು. ಬಡವರ ಹಿತ ಬಯಸುವ ದುಗ್ಗಮ್ಮ ದೇವಸ್ಥಾನದ ಆಡಳಿತ ಮಂಡಳಿ, ದಾವಣಗೆರೆಯ ಹಿರಿಯರು, ಸ್ವಾಮಿಗಳು, ಮುಖಂಡರು ಆಲೋಚಿಸಿ, ದುಗ್ಗಮ್ಮನ ಜಾತ್ರೆಯನ್ನು 6 ಅಥವಾ 12 ವರ್ಷಕ್ಕೊಮ್ಮೆ ಮಾಡಲು ನಿರ್ಧಾರಕ್ಕೆ ಬರಲೆಂದು ವಿನಂತಿ.

-ಪ್ರೊ. ಎಂ.ಬಸವರಾಜ್, ಲಾಯರ್ ಎಂ. ಸಿದ್ದಯ್ಯ, ಲಾಯರ್ ಭೈರೇಶ್, ಶಿವನಕೆರೆ ಬಸವಲಿಂಗಪ್ಪ

## ಡಿ.ಎಂ.ಕೆ.ಗೆ 509 ಕೋಟಿ ರೂ. ದೇಣಿಗೆ ನೀಡಿದ ಫ್ಯೂಚರ್ ಗೇಮಿಂಗ್

ನವದೆಹಲಿ, ಮಾ. 17 - ಚುನಾವಣಾ ಬಾಂಡ್‌ಗಳನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದ ಫ್ಯೂಚರ್ ಗೇಮಿಂಗ್ ಅಂಡ್ ಹೋಟೆಲ್ ಸರ್ವೀಸಸ್, 509 ಕೋಟಿ ರೂ.ಗಳನ್ನು ತಮಿಳುನಾಡಿನ ಆಡಳಿತಾರೂಢ ಡಿ.ಎಂ.ಕೆ.ಗೆ ನೀಡಿದೆ ಎಂದು ಚುನಾವಣಾ ಆಯೋಗದ ಮಾಹಿತಿ ತಿಳಿಸಿದೆ.

ಫ್ಯೂಚರ್ ಗೇಮಿಂಗ್‌ನ ಸ್ಯಾಂಟಿಯಾಗೋ ಮಾರ್ಟಿನ್ ಅವರು 1,368 ಕೋಟಿ ರೂ.ಗಳ ಬಾಂಡ್‌ಗಳನ್ನು ಖರೀದಿಸಿದ್ದರು. ಇದರಲ್ಲಿ ಶೇ.37ರಷ್ಟನ್ನು ಡಿ.ಎಂ.ಕೆ.ಗೆ ನೀಡಲಾಗಿದೆ. ಮೆಗಾ ಇಂಜಿನಿಯರಿಂಗ್ ಕಂಪನಿಯು ಡಿ.ಎಂ.ಕೆ.ಗೆ 105 ಕೋಟಿ ರೂ. ನೀಡಿದೆ. ಸನ್ ಟಿವಿ 100 ಕೋಟಿ ರೂ. ಹಾಗೂ ಇಂಡಿಯಾ ಸಿಮೆಂಟ್ಸ್ 14 ಕೋಟಿ ರೂ. ನೀಡಿದೆ.

## ಹೊಸಪಾಳ್ಯ : ಇಂದು ಕೆರೆ ಹಸ್ತಾಂತರ

ಮಲೇಬೆನ್ನೂರು ಸಮೀಪದ ಹೊಸಪಾಳ್ಯ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 'ನಮ್ಮೂರು ನಮ್ಮ ಕೆರೆ' ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಪುನಶ್ಚೇತನಗೊಳಿಸಿರುವ ಕರಿಯಮ್ಮ ದೇವಿ ಕೆರೆ ಹಸ್ತಾಂತರ ಹಾಗೂ ನಾಮಫಲಕ ಅನಾವರಣ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಕೃಷಿ ಅಧಿಕಾರಿ ಗಂಗಾಧರ್ ತಿಳಿಸಿದ್ದಾರೆ.

ಸಾನ್ನಿಧ್ಯ : ಶ್ರೀ ಸ್ವಾಮಿ ಶಾರದೇಶಾನಂದಜೀ ಮಹಾರಾಜ್, ಉದ್ಘಾಟನೆ : ಮಂಜುಳಾ ಶೇಖರಪ್ಪ, ಅಧ್ಯಕ್ಷತೆ : ಗದಿಗೆಪ್ಪ, ನಾಮಫಲಕ ಅನಾವರಣ : ಶ್ರೀಮತಿ ಗೀತಾ, ಕೆರೆ ಹಸ್ತಾಂತರ : ಎಂ.ಲಕ್ಷ್ಮಣ, ಮುಖ್ಯ ಅತಿಥಿಗಳು : ಎನ್.ಜಿ.ನಾಗನಗೌಡ್ರು, ಬಿ.ಹೆಚ್.ಈರಪ್ಪ, ಬಿ.ದಾನಪ್ಪ, ಹೆಚ್.ಪಿ.ನಾಗೇಂದ್ರ.

# ಲೋಕಸಭೆ ಗೆಲುವಿಗೆ ಕಾರ್ಯಕರ್ತರು ಸಂಘಟಿತರಾಗಬೇಕು

## ರಾಣೇಬೆನ್ನೂರು ಬಿಜೆಪಿ ಪದಗ್ರಹಣ ಕಾರ್ಯಕ್ರಮದಲ್ಲಿ ಅರುಣಕುಮಾರ್



ರಾಣೇಬೆನ್ನೂರು,ಮಾ.17- ಕಾರ್ಯಕರ್ತರು ಸಂಘಟಿತರಾಗಿ ಲೋಕಸಭೆ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಭಾರೀ ಅಂತರದ ಗೆಲುವು ಸಾಧಿಸುವುದರೊಂದಿಗೆ ಮತ್ತೆ ನರೇಂದ್ರ ಮೋದಿ ಅವರನ್ನು ಪ್ರಧಾನಮಂತ್ರಿ ಮಾಡಬೇಕು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಅರುಣಕುಮಾರ್ ಪೂಜಾರ್ ಮನವಿ ಮಾಡಿದರು.

ಪಕ್ಷದ ಕಛೇರಿಯಲ್ಲಿ ತಾಲ್ಲೂಕಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ಸಂಸ್ಕೃತಿ ಕಲಿಸುವ ಪಕ್ಷ, ಪ್ರತಿಯೊಬ್ಬ ಕಾರ್ಯಕರ್ತರು ಮುಖಂಡರಾಗಬೇಕು. ಬರಲಿರುವ ಲೋಕಸಭೆ ಹಾಗೂ ಸ್ಥಳೀಯ ಸಂಘ, ಸಂಸ್ಥೆಗಳಲ್ಲಿ ಪಕ್ಷ ಆಡಳಿತ ನಡೆಸುವಂತೆ ಕಾರ್ಯಕರ್ತರು ಶ್ರಮಿಸಬೇಕು ಎಂದು ರಾಜ್ಯ ಉಪಾಧ್ಯಕ್ಷ ಡಾ.ಬಸವರಾಜ ಕೇಲಗಾರ ಹೇಳಿ ನೂತನ ಪದಾಧಿಕಾರಿಗಳಿಗೆ ಶುಭ ಕೋರಿದರು.

ಪ್ರಧಾನಿ ನರೇಂದ್ರ ಮೋದಿ ಅಭಿವೃದ್ಧಿ ಕಾರ್ಯಗಳನ್ನು ಮನೆ ಮನೆಗೆ ತಲುಪಿಸುವುದರೊಂದಿಗೆ ಬರಲಿರುವ ಎಲ್ಲ ಚುನಾವಣೆಗಳಲ್ಲಿ ಪಕ್ಷವನ್ನು ಆಡಳಿತಕ್ಕೆ ತರಲು ನೂತನ ಪದಾಧಿಕಾರಿಗಳು ಶ್ರಮಿಸಬೇಕು ಎಂದು ಅರಣ್ಯ ಅಭಿವೃದ್ಧಿ ನಿಗಮದ ನಿರ್ದೇಶಕರಾದ ಭಾರತಿ ಜಂಬಗಿ, ಮುಖಂಡರಾದ ಎ.ಬಿ.ಪಾಟೀಲ, ಎಸ್.ಎಸ್. ರಾಮಲಿಂಗಣ್ಣನವರ, ಚೋಳಪ್ಪ ಕಸವಾಳ, ಪ್ರಕಾಶ ಪೂಜಾರ, ಸಂತೋಷ ಪಾಟೀಲ ಹೇಳಿದರು.

ನೂತನ ಅಧ್ಯಕ್ಷರಾದ ಪರಮೇಶ ಗೂಳಣ್ಣನವರ, ರಮೇಶ ಗುತ್ತಲ ಹಾಗೂ ಇನ್ನಿತರೆ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ನೀಡಿ ಗೌರವಿಸಲಾಯಿತು. ತ್ರಿವೇಣಿ ಪವಾರ, ಉಸ್ತುವಾರಿ ಕಲ್ಲೇಶ, ಮಾಜಿ ಜಿಲ್ಲಾಧ್ಯಕ್ಷ ಸಿದ್ದರಾಜ ಕಲಕೋಟಿ, ಭಾರತಿ ಅಳವಂಡಿ, ಸಿದ್ದಪ್ಪ ಚಿಕ್ಕಬಿದರಿ, ದೀಪಕ್ ಹರಪನಹಳ್ಳಿ, ಮಂಜುನಾಥ ಓಲೇಕಾರ, ಅಮೋಘ ಬದಾಮಿ ಮತ್ತಿತರರಿದ್ದರು.

# ನಾಗಮ್ಮ ಕೇಶವಮೂರ್ತಿ ನಿಧನ : ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ



ದಾವಣಗೆರೆ, ಮಾ.17- ಮಾಜಿ ಸಚಿವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರ ನಿಧನಕ್ಕೆ ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ನಾಗಮ್ಮ ಕೇಶವಮೂರ್ತಿ ಅವರು ಕಾಂಗ್ರೆಸ್ ಪಕ್ಷದಿಂದ ಮಾಯಕೊಂಡ ಮತ್ತು ದಾವಣಗೆರೆ ಕ್ಷೇತ್ರವನ್ನು ಪ್ರತಿನಿಧಿಸಿ ಸಚಿವರಾಗಿ ಉತ್ತಮ ಕೆಲಸ ಮಾಡಿರುವುದನ್ನು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ಹಿರಿಯ ರಾಜಕಾರಣಿ ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ ಅವರ ನಿಧಾನಕ್ಕೆ ಕೆಪಿಸಿಸಿ ವಕ್ತಾರ ಡಿ.ಬಸವರಾಜ್ ಸಂತಾಪ ವ್ಯಕ್ತಪಡಿಸಿದ್ದಾರೆ. ಆರು ದಶಕಕ್ಕೂ ಹೆಚ್ಚು ಕಾಲ ಬಡ ಜನರ ಸೇವೆ ಸಲ್ಲಿಸಿದ್ದ ಸಿಎನ್ಕೆ, ಬಡಜನರು ಅವರನ್ನು ದಾವಣಗೆರೆಯ ಇಂದಿರಾ ಗಾಂಧಿ ಎಂದು ಕರೆಯುತ್ತಿದ್ದರು. ಮಹಿಳಾ ಸಬಲೀಕರಣಕ್ಕಾಗಿ ವನಿತಾ ಸಮಾಜವನ್ನು ಸ್ಥಾಪನೆ ಮಾಡಿ ಸಾವಿರಾರು ಮಹಿಳೆಯರ ನೆರವಿಗೆ ನಿಂತಿದ್ದರು ಎಂದು ಬಸವರಾಜ್ ಹೇಳಿದ್ದಾರೆ.

ನಾಗಮ್ಮ ಕೇಶವಮೂರ್ತಿ ನಿಧನಕ್ಕೆ ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ, ಸ್ನೇಹ ಮಹಿಳಾ ಬಳಗದ ಗೌರವಾಧ್ಯಕ್ಷೆ ಶ್ರೀಮತಿ ಮಂಜುಳಾ ಬಸವಲಿಂಗಪ್ಪ, ಶಿವನಕೆರೆ ಬಸವಲಿಂಗಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

# ನಾಗಮ್ಮ ಕೇಶವಮೂರ್ತಿ ಮಾತೃವಾತ್ಸಲ್ಯದ ಮಹಾತಾಯಿ

## ಮಾಜಿ ಸಚಿವ ಎಚ್. ಆಂಜನೇಯ ಕಂಬನಿ

ದಾವಣಗೆರೆ, ಮಾ. 17 - ಚಿತ್ರದುರ್ಗ - ದಾವಣಗೆರೆ ಅವಳಿ ಜಿಲ್ಲೆಯಲ್ಲಿ ರಾಜಕೀಯ ಛಾಪು ಮೂಡಿಸಿದ್ದ ನಾಗಮ್ಮ ಕೇಶವಮೂರ್ತಿ ಅವರು ನಾಡಿನ ದಿಟ್ಟ ಮಹಿಳೆ ಎಂದು ಮಾಜಿ ಸಚಿವ ಎಚ್. ಆಂಜನೇಯ ಬಣ್ಣಿಸಿದ್ದಾರೆ.

ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳ ಮೂಲಕ ರಾಜ್ಯದ ಅಭಿವೃದ್ದಿಗೆ ಶ್ರಮಿಸಿದ್ದ ಸಿಎನ್ಕೆ ಬದ್ಧತೆ ಈಗಲೂ ಮಾದರಿಯಾಗಿದೆ. ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ದಾವಣಗೆರೆ ನಗರ, ಜಿಲ್ಲೆಯ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಸ್ಮರಣೀಯ ಎಂದು ಅವರು ಹೇಳಿದ್ದಾರೆ.

ಅದರಲ್ಲೂ ಶಿಕ್ಷಣ ಸಚಿವರಾಗಿದ್ದ ಸಂದರ್ಭದಲ್ಲಿ ಶಿಕ್ಷಕರ ನೇಮಕಾತಿಯಲ್ಲಿನ ಅಕ್ರಮಕ್ಕೆ ಕಡಿವಾಣ ಹಾಕಲು ನೇರ ನೇಮಕಾತಿ ಪದ್ಧತಿ ಜಾರಿಗೊಳಿಸುವ ಮೂಲಕ ಅರ್ಹರಿಗೆ ಉದ್ಯೋಗ ಸಿಗುವ ವ್ಯವಸ್ಥೆ ತಂದರು. ಈ ಮೂಲಕ ಮಕ್ಕಳಿಗೆ ಗುಣಮಟ್ಟದ ಬೋಧನೆ ಸಿಗುವ ಜೊತೆಗೆ ಶೈಕ್ಷಣಿಕ ಕ್ಷೇತ್ರದ ಬಲವರ್ಧನೆಗೆ ಶ್ರಮಿಸಿದ್ದರು.

ನನ್ನಂತಹ ಯುವಕರು ರಾಜಕೀಯದತ್ತ ಆಕರ್ಷಣೆ ಬೆಳೆಸಿಕೊಂಡು ಉನ್ನತ ರಾಜಕೀಯ ಸ್ಥಾನಮಾನ ಪಡೆಯಲು ನಾಗಮ್ಮ ಕೇಶಮೂರ್ತಿ ಅವರೇ ಮುಖ್ಯ ಕಾರಣಕರ್ತರು. ನಮ್ಮನ್ನು ಸ್ವಂತ ಮಕ್ಕಳಂತೆ ಕಾಣುತ್ತಿದ್ದ, ನಮ್ಮ ರಾಜಕೀಯ ಬೆಳವಣಿಗೆಗೆ ಶ್ರಮಿಸುತ್ತಿದ್ದ ಅವರು ನಮ್ಮ ಪಾಲಿಗೆ ರಾಜಕೀಯ ಗುರು ಅಷ್ಟೇ ಅಲ್ಲದೇ ಅಮ್ಮ ಆಗಿದ್ದರು. ಅವರ ಅಗಲಿಕೆ ಸುದ್ದಿ ಸ್ವಂತ ತಾಯಿಯನ್ನೇ ಕಳೆದುಕೊಂಡಷ್ಟು ದುಃಖವನ್ನು ಉಂಟು ಮಾಡಿದೆ. ನಮ್ಮಂತಹ ರಾಜಕಾರಣಿಗಳ ಪಾಲಿಗೆ ತಾಯಿ ಆಗಿದ್ದ ಅವರ ಸೇವೆ, ಮಾತೃವಾತ್ಸಲ್ಯ ಇನ್ನೂ ನೆನಪಷ್ಟೇ ಎಂಬುದು ದುಃಖಕರ ವಿಷಯವಾಗಿದೆ ಎಂದು ಆಂಜನೇಯ ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

# ಹರಿಹರದಲ್ಲಿ ಇಂದು - ನಾಳೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

ಹರಿಹರ, ಮಾ.17 - ನಗರದ ಸಿದ್ದೇಶ್ವರ್ ಪ್ಯಾಲೇಸ್ ಸಭಾಂಗಣದಲ್ಲಿ ಜಿಲ್ಲಾ ಮತ್ತು ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ 13ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಡಗರ - ಸಂಭ್ರಮದಿಂದ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ನಗರದ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾಳೆ ದಿನಾಂಕ 18ರ ಸೋಮವಾರ ಬೆಳಗ್ಗೆ 8 ಗಂಟೆಗೆ ರಾಷ್ಟ್ರ ಧ್ವಜಾರೋಹಣ ತಹಶೀಲ್ದಾರ್ ಕೆ.ಎಂ. ಗುರುಬಸವರಾಜ್, ಪರಿಷತ್ತಿನ ಧ್ವಜಾರೋಹಣ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ, ನಾಡ ಧ್ವಜಾರೋಹಣ ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್ ಮಾಡಲಿದ್ದಾರೆ.

ಬೆಳಗ್ಗೆ 9 ಗಂಟೆಗೆ ಸಮ್ಮೇಳನ ಅಧ್ಯಕ್ಷರ ಮೆರವಣಿಗೆ ನಗರದ ಶ್ರೀ ಹರಿಹರೇಶ್ವರ ದೇವಾಲಯದ ಮುಂಭಾಗದಿಂದ ಪ್ರಾರಂಭಗೊಳ್ಳಲಿದೆ. ಉದ್ಘಾಟನೆಯನ್ನು ಎಸ್ಪಿ ಉಮಾ ಪ್ರಶಾಂತ್ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ ಸಹಾಯಕ ನಿರ್ದೇಶಕ ಕೆ ರವಿಚಂದ್ರ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಜಿ. ಕರಿಸಿದ್ದಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಉಪನಿರ್ದೇಶಕ ಜೆ. ಕೊಟ್ರೇಶ್, ಉಪನ್ಯಾಸಕರ ಸಂಘದ ಜಿಲ್ಲಾ ಅಧ್ಯಕ್ಷ ಸಿ.ಜಿ. ರವಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಬೆಳಗ್ಗೆ 10-30 ಕ್ಕೆ ಸಮ್ಮೇಳನದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಮಾಡಲಿದ್ದಾರೆ, ಅಧ್ಯಕ್ಷತೆಯನ್ನು ಶಾಸಕ ಬಿ.ಪಿ. ಹರೀಶ್ ವಹಿಸಲಿದ್ದಾರೆ.

ಸಮ್ಮೇಳನದ ಅಧ್ಯಕ್ಷತೆಯನ್ನು ಪ್ರೊ ಸಿ. ವಿ. ಪಾಟೀಲ್ ವಹಿಸುವರು. ಡಾ. ಹೆಚ್. ಗಿರಿಜಮ್ಮ ಮಹಾದ್ವಾರ ಉದ್ಘಾಟನೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ, ಹೆಳವನಕಟ್ಟೆ ಗಿರಿಯಮ್ಮ ಹಾಗೂ ಪ್ರೊ. ಬಿ. ಕೃಷ್ಣಪ್ಪ ವೇದಿಕೆ ಉದ್ಘಾಟನೆಯನ್ನು, ಸಂಸದ ಜಿ.ಎಂ. ಸಿದ್ದೇಶ್ವರ ಮತ್ತು ರಾಜ್ಯ ಕಸಾಪ ಅಧ್ಯಕ್ಷ ಡಾ.ಮಹೇಶ್ ಜೋಶಿ ಮಾಡಲಿದ್ದಾರೆ. ಸಮ್ಮೇಳನದ ಪ್ರಧಾನ ಭಾಷಣ ಬೆಂಗಳೂರಿನ ವಿಶ್ರಾಂತ ಕುಲಪತಿ ಪ್ರೊ ಮಲ್ಲೇಪುರಂ ಜಿ. ವೆಂಕಟೇಶ್ ಮಾಡಲಿದ್ದಾರೆ,

ಹರಿಹರೇಶ್ವರ ದೇವಸ್ಥಾನ ನಿರ್ಮಿತ ಮಂತ್ರಿ ಪೊಲಾಳ್ವ ದಂಡನಾಥ ಮತ್ತು ಮಿಠಾಯಿ ಡಿ. ಉಜ್ಜೇಶ್ ಸಭಾಂಗಣ ಉದ್ಘಾಟನೆಯನ್ನು ಶಾಸಕ ಡಿ.ಜಿ. ಶಾಂತನಗೌಡ್ರು, ಎ.ಆರ್. ಉಜ್ಜಿನಪ್ಪ, ಮಳಿಗೆಗಳ ಉದ್ಘಾಟನೆಯನ್ನು ಶಾಸಕ ಕೆ. ಬಸವಂತಪ್ಪ, ಚಿತ್ರಕಲಾ ಪ್ರದರ್ಶನ ಉದ್ಘಾಟನೆಯನ್ನು ಶಾಸಕ ಬಸವರಾಜ್ ಶಿವಗಂಗಾ ಹಾಗೂ ಸಂಗಮ ಸಿರಿ ಸ್ಮರಣ ಸಂಚಿಕೆ ಬಿಡುಗಡೆಯನ್ನು ಶಾಸಕ ಸಿ. ದೇವೇಂದ್ರಪ್ಪ ಮಾಡಲಿದ್ದಾರೆ.

ಕೃತಿಗಳ ಬಿಡುಗಡೆಯನ್ನು ಎಂ.ಎಲ್.ಸಿ.ಗಳಾದ ಅಬ್ದುಲ್ ಜಬ್ಬಾರ್, ಡಾ. ವೈ.ಎ. ನಾರಾಯಣಸ್ವಾಮಿ, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಎಸ್ ರಾಮಪ್ಪ ಮಾಡುವರು. ಮುಖ್ಯ ಅತಿಥಿಗಳಾಗಿ ಮಾಜಿ ಎಂ.ಎಲ್.ಸಿ ಮೋಹನ್ ಕುಮಾರ್ ಕೊಂಡಜ್ಜಿ, ಬಾಪೂಜಿ ಸಂಸ್ಥೆಯ ನಿರ್ದೇಶಕರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಎ.ಕೆ. ಫೌಂಡೇಶನ್ ಸಂಸ್ಥಾಪಕ ಕೆ.ಜೆ. ಕೊಟ್ರೇಶ್, ಇನ್ಸೈಟ್ ಸಂಸ್ಥಾಪಕ ಜಿ.ಬಿ. ವಿನಯಕುಮಾರ್, ಆರೈಕೆ ಆಸ್ಪತ್ರೆ ವೈದ್ಯ ಡಾ ಟಿ.ಜಿ. ರವಿಕುಮಾರ್, ತಾಪಂ ಇಓ ರಮೇಶ್ ಸುಲ್ಪಿ, ಬಿಇಓ ಹನುಮಂತಪ್ಪ, ಜಿಲ್ಲಾ ಸಹಕಾರಿ ಬ್ಯಾಂಕ್ ಉಪಾಧ್ಯಕ್ಷ ಡಿ ಕುಮಾರ್, ಹಾವೇರಿ ಜಿಲ್ಲಾ ಕಸಾಪ ಅಧ್ಯಕ್ಷ ಹೆಚ್.ಜಿ. ಲಿಂಗಯ್ಯ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ವೀರೇಶ್ ಎಸ್ ಒಡೇನಪುರ, ತಾಲ್ಲೂಕು ಅಧ್ಯಕ್ಷ ಎ.ಕೆ. ಭೂಮೇಶ್, ರಾಷ್ಟ್ರೀಯ ಗೋವು ಸಂಘದ ಅಧ್ಯಕ್ಷ ಡಾ ಜಿ.ಟಿ. ಸಿದ್ದಪ್ಪ, ಸ್ಮರಣ ಸಂಚಿಕೆ ಸಂಪಾದಕರ ನುಡಿ ಸಾಹಿತಿ, ಪ್ರೊ ಹೆಚ್.ಎ. ಭಿಕ್ಷಾವರ್ತಿಮಠ್, ಸಮ್ಮೇಳನಾಧ್ಯಕ್ಷರ ಪರಿಚಯ ಕಾರ್ಯದರ್ಶಿ ಬಿ.ಬಿ. ರೇವಣ್ಣನಾಯ್ಕ್, ಮಾಡಲಿದ್ದಾರೆ.

ಗೋಷ್ಠಿ-1. ಮಧ್ಯಾಹ್ನ 2 ಗಂಟೆಗೆ 'ಶಿಕ್ಷಣ ಮತ್ತು ಕನ್ನಡ ಅಸ್ಮಿತೆ' ಅಧ್ಯಕ್ಷತೆ ಶಿಕ್ಷಣ ತಜ್ಞ ಡಾ ಹೆಚ್.ಎ. ವಾಮದೇವಪ್ಪ, 'ಕರ್ನಾಟಕ ಸುವರ್ಣ ಸಂಭ್ರಮದಲ್ಲಿ ನಾಡು, ನುಡಿ ಸಾಹಿತ್ಯಿಕ ಸಾಧನೆ' ಬಗ್ಗೆ ಸಾಂಸ್ಕೃತಿಕ ಚಿಂತಕ ಡಾ. ಹೆಚ್.ಬಿ. ಮಂಜುನಾಥ್ ಮಾತನಾಡಲಿದ್ದು, 'ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ' ಸಾಹಿತಿ ಸೀತಾ ಎಸ್. ನಾರಾಯಣ, ಕನ್ನಡ ಶಾಲೆಗಳ ಸ್ಥಿತಿಗತಿ ಪರಿಹಾರ, ಹರಪನಹಳ್ಳಿ ಕಾಲೇಜು ಪ್ರಾಂಶುಪಾಲ ಹೆಚ್. ಮಲ್ಲಿಕಾರ್ಜುನ್ ವಿಷಯಗಳ ಮಂಡನೆ ಮಾಡಲಿದ್ದಾರೆ.

ಗೋಷ್ಠಿ -2. ಮಧ್ಯಾಹ್ನ 3-30 ಕ್ಕೆ 'ಇತಿಹಾಸ, ಕೃಷಿ ಮತ್ತು ದಲಿತ ಚಳವಳಿ' ಅಧ್ಯಕ್ಷತೆ ಹಿರಿಯ ವಿದ್ವಾಂಸ ಪ್ರೊ. ಹೆಚ್.ಎಸ್. ಹರಿಶಂಕರ್,' ರೈತರ ಸಮಸ್ಯೆಗಳು ಮತ್ತು ಪರಿಹಾರ' ರೈತ ಸಂಘ ರಾಜ್ಯ ಅಧ್ಯಕ್ಷ ಹೆಚ್. ಆರ್. ಬಸವರಾಜಪ್ಪ, 'ಪ್ರೊ. ಬಿ. ಕೃಷ್ಣಪ್ಪ ಮತ್ತು ದಲಿತ ಚಳವಳಿ' ಸಾಂಸ್ಕೃತಿಕ ಚಿಂತಕ ಡಾ ಎ.ಬಿ. ರಾಮಚಂದ್ರಪ್ಪ ವಿಷಯಗಳ ಮಂಡನೆ ಮಾಡಲಿದ್ದಾರೆ.

ಮಧ್ಯಾಹ್ನ 4-30 ಕ್ಕೆ ಯುವ ಕವಿಗೋಷ್ಠಿ. ಅಧ್ಯಕ್ಷತೆ ಸಾಹಿತಿ ಎಸ್. ಸಿದ್ದೇಶ್ ಕುರ್ಕಿ, ಆಶಯ ನುಡಿ ಸಾಹಿತಿ ಕಮಲಾಪುರ ಕೆ ಪಂಚಾಕ್ಷರಿ, ಸಂಜೆ 6-30 ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ, ಕಿರುತೆರೆ ನಟ ಡಾ. ರಾಧಾಕೃಷ್ಣ ಪಲ್ಲಕಿ, ಅಧ್ಯಕ್ಷತೆ ಸಾಹಿತಿ ಹೆಚ್.ಕೆ. ಕೊಟ್ರಪ್ಪ.

ಈ ಸಂದರ್ಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ ಗೌರವ ಕಾರ್ಯದರ್ಶಿಗಳಾದ ಎಂ. ಚಿದಾನಂದ ಕಂಚಿಕೇರಿ, ಬಿ.ಬಿ. ರೇವಣ್ಣನಾಯ್ಕ್, ಖಜಾಂಚಿ ವಿಜಯ ಮಹಾಂತೇಶ್ ಇತರರು ಹಾಜರಿದ್ದರು.




## ಅತ್ಯಾಧುನಿಕ ಬೋಲಿಂಗ್ ಮಿಷನ್‌ಗೆ ಚಾಲನೆ



ದಾವಣಗೆರೆ, ಮಾ. 17 - ದಾವಣಗೆರೆ ಕ್ರಿಕೆಟ್ ಅಕಾಡೆಮಿ ವತಿಯಿಂದ ಹಮ್ಮಿಕೊಂಡಿದ್ದ ಲಿವರೇಜ್ ಕಂಪನಿಯ ಅತ್ಯಾಧುನಿಕ ಬೋಲಿಂಗ್ ಮಿಷನ್‌ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಯಂತ್ರಕ್ಕೆ ಬಾಲ್ ಹಾಕುವ ಮೂಲಕ ಚಾಲನೆ ನೀಡಿದರು.

ಕ್ರಿಕೆಟ್ ಕಲಿಯುವ ಹಾಗೂ ಆಸಕ್ತ ಮಕ್ಕಳಿಗೆ ಬೌಲಿಂಗ್ ಮಷಿನ್ ಬಳಸಿ ಬ್ಯಾಟಿಂಗ್ ಕಲಿಕೆಗೆ ಅನುಕೂಲ ಕಲ್ಪಸಲಾಗುವುದು ಎಂದು ಕ್ರಿಕೆಟ್ ಕೋಚ್ ತಿಮ್ಮೇಶ್ ಹೇಳಿದರು.

ಈ ಸಂದರ್ಭದಲ್ಲಿ ಅಕಾಡೆಮಿ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಮೇಯರ್ ವಿನಾಯಕ ಪೈಲ್ವಾನ್, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಕೆ. ಚಮನ್ ಸಾಬ್, ಮುಖಂಡರಾದ ಗಣೇಶ್ ಹುಲ್ಮನಿ, ಉಮೇಶ್, ಗೋಪಾಲಕೃಷ್ಣ, ರಮೇಶ ನಾಯ್ಕ, ಬಿ. ಬಸವರಾಜ್, ಉಮೇಶ್ ಸಿರಿಗೆರೆ, ತಿಪ್ಪೇಶ್, ಮುರುಳೀಧರ, ಅನಿಲ್ ಸೇರಿದಂತೆ ಅನೇಕರಿದ್ದರು.

## ಶ್ಯಾಬನೂರಿನಲ್ಲಿ ನಾಳೆ ಆಂಜನೇಯ ರಥೋತ್ಸವ



ದಾವಣಗೆರೆ, ಮಾ. 17 - ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ನಾಡಿದ್ದು ದಿನಾಂಕ 19ರ ಮಂಗಳ ವಾರ ರಾತ್ರಿ 12 ಗಂಟೆಗೆ ಜರುಗಲಿದೆ.

ದಿನಾಂಕ 20ರ ಬುಧವಾರ ಬೆಲ್ಲದ ಬಂಡಿ ಉತ್ಸವ, ದಿನಾಂಕ 21ರ ಗುರುವಾರ ಓಕುಳಿ ಕಾರ್ಯಕ್ರಮ ನಡೆಯಲಿದೆ.

**ರಂಜಾನ್ ರೋಜಾ ಟೈಮ್**

ದಿನಾಂಕ : 18 -03-2024
ಇಫ್ತಾರ್ ಸಮಯ : 6-43
ದಿನಾಂಕ : 19-03-2024
ಸಹೇರಿ ಸಮಯ : 5-12

## ಸಿ.ಎ.ಎ. ಪ್ರಶ್ನಿಸಿ ಕೇರಳ ಸರ್ಕಾರದಿಂದ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ

ನವದೆಹಲಿ, ಮಾ. 17 - ಪೌರತ್ವ ತಿದ್ದುಪಡಿ ಕಾಯ್ದೆ (ಸಿ.ಎ.ಎ.) ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಕೇರಳ ಹೊಸ ಅರ್ಜಿ ದಾಖಲಿಸಿದೆ. ಸಿ.ಎ.ಎ. ಪಕ್ಷಪಾತಿ ಹಾಗೂ ಸಂವಿಧಾನದ ಸೆಕ್ಯುಲರ್ ತತ್ವಗಳಿಗೆ ವಿರುದ್ಧವಾಗಿದೆ ಎಂದು ರಾಜ್ಯ ಸರ್ಕಾರ ಆರೋಪಿಸಿದೆ. 2019ರಲ್ಲೇ ಕಾಯ್ದೆ ರೂಪಿಸಲಾಗಿತ್ತು. ಆದರೆ, ಇದುವರೆಗೂ ಅದನ್ನು ಜಾರಿಗೆ ತಂದಿರಲಿಲ್ಲ. ಹೀಗಾಗಿ ಈ ಕಾಯ್ದೆ ಜಾರಿಗೆ ಯಾವುದೇ ಅವಸರವಿಲ್ಲ. ಕಾಯ್ದೆಯನ್ನು ತಡೆಯಬೇಕು ಎಂದು ರಾಜ್ಯ ಸರ್ಕಾರ ಅರ್ಜಿಯಲ್ಲಿ ಹೇಳಿದೆ.

## ನಗರದಲ್ಲಿ ನಾಳೆ, ನಾಡಿದ್ದು ಕೃಷಿ ಮಾರುಕಟ್ಟೆ ಬಂದ್

ದಾವಣಗೆರೆ, ಮಾ.17- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಜಾತ್ರೆಯ ಅಂಗವಾಗಿ ನಾಡಿದ್ದು ದಿನಾಂಕ 19 ಮತ್ತು 20ರಂದು ಕೃಷಿ ಉತ್ಪನ್ನಗಳ ವ್ಯಾಪಾರ-ವಹಿವಾಟು ಸ್ಥಗಿತಗೊಳಿಸಲಾಗಿದೆ. ವರ್ತಕರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇರುವುದರಿಂದ ರೈತರು ಕೃಷಿ ಉತ್ಪನ್ನವನ್ನು ಮಾರುಕಟ್ಟೆಗೆ ತರಬಾರದೆಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

## ನಮಾಜ್ ಮಾಡುತ್ತಿದ್ದ ವಿದೇಶಿ ವಿದ್ಯಾರ್ಥಿಗಳ ಮೇಲೆ ಹಲ್ಲೆ

ಅಹಮದಾಬಾದ್, ಮಾ. 17 – ಗುಜರಾತ್ ವಿಶ್ವವಿದ್ಯಾಲಯದ ಅಹಮದಾಬಾದ್ ಹಾಸ್ಟೆಲ್‌ನಲ್ಲಿ ನಮಾಜ್ ಮಾಡುತ್ತಿದ್ದ ಹಲವು ದೇಶಗಳ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಪೊಲೀಸರು ಇಬ್ಬರನ್ನು ಬಂಧಿಸಿದ್ದು, ಇನ್ನೂ ಹಲವರ ಶೋಧ ನಡೆಸಿದ್ದಾರೆ. ಶನಿವಾರ ರಾತ್ರಿ ಎ – ಬ್ಲಾಕ್‌ನಲ್ಲಿ ನಡೆದ ಘಟನೆಯಲ್ಲಿ ಶ್ರೀಲಂಕಾ ಹಾಗೂ ತಜಕಿಸ್ತಾನದ ಇಬ್ಬರು ವಿದ್ಯಾರ್ಥಿಗಳು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಈ ಬಗ್ಗೆ 20-25 ಗುರುತಿಸಲಾಗದ ವ್ಯಕ್ತಿಗಳ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ. ಇದುವರೆಗೂ ಹಿತೇಶ್ ಮೇವಡಾ ಹಾಗೂ ಭರತ್ ಪಟೇಲ್ ಎಂಬುವವರನ್ನು ಬಂಧಿಸಲಾಗಿದೆ. ಈ ಘಟನೆ ತನಿಖೆಗಾಗಿ ಒಂಭತ್ತು ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.




## ಮಲೇಬೆನ್ನೂರು : ಪಾನಿಪುರಿ ಸೇವಿಸಿ ಅಸ್ವಸ್ಥಗೊಂಡಿದ್ದ ಬಾಲಕನ ಸಾವು

### ಆಸ್ಪತ್ರೆ ಬಿಲ್ ಪೂರ್ಣ ವಿನಾಯಿತಿ ನೀಡುವ ಮೂಲಕ ಮಾನವೀಯತೆ ಮೆರೆದ ಡಾ. ಪ್ರಭಾ ಮಲ್ಲಿಕಾರ್ಜುನ್



ಮಲೇಬೆನ್ನೂರು, ಮಾ.17 - ಪಟ್ಟಣದಲ್ಲಿ ಗುರುವಾರ ಪಾನಿಪುರಿ ಸೇವಿಸಿ ವಾಂತಿಭೇದಿಯಿಂದ ಅಸ್ವಸ್ಥರಾಗಿದ್ದ 19 ಮಕ್ಕಳ ಪೈಕಿ ಒಂದು ಮಗು ಭಾನುವಾರ ಮೃತಪಟ್ಟಿದೆ.

ಬಾಪೂಜಿ ಮಕ್ಕಳ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಿಲಾಲ್ ಎಂಬ ಏಳು ವರ್ಷದ ಬಾಲಕ ಭಾನುವಾರ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಆಸ್ಪತ್ರೆ ಆವರಣದಲ್ಲಿ ಮೃತ ಬಾಲಕನ ಕುಟುಂಬ ವರ್ಗದವರ ರೋಧನೆ ಮುಗಿಲು ಮುಟ್ಟಿತ್ತು. ವಿಷಯ ತಿಳಿದು ಆಸ್ಪತ್ರೆಗೆ ಆಗಮಿಸಿದ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಹಾಗೂ ತುರ್ಚಘಟ್ಟ ರಿಯಾಜ್, ಮೃತ ಮಗುವಿನ ಆಸ್ಪತ್ರೆ ಬಿಲ್‌ನಲ್ಲಿ ರಿಯಾಯಿತಿ ನೀಡುವಂತೆ ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ ವಿನಂತಿಸಿಕೊಂಡರು. ಘಟನೆಯ ಬಗ್ಗೆ ಬೇಸರ ವ್ಯಕ್ತ ಪಡಿಸಿದ ಪ್ರಭಾ, ಆಸ್ಪತ್ರೆ ಬಿಲ್‌ನಲ್ಲಿ ಪೂರ್ಣ ರಿಯಾಯಿತಿ ನೀಡುವ ಮೂಲಕ ನೊಂದ ಕುಟುಂಬಕ್ಕೆ ನೆರವಾಗಿದ್ದಾರೆ.







KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas